ವಾ ರ ಪ ತ್ರಿ ಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 29 ಜುಲೈ 20, 1986 ಬೆಲೆ 80 ಪೈಸೆ

ಜಗಜೀವನ ರಾಂ ನಿಧನಕ್ಕೆ ಸಂತಾಪ

ದೀರ್ಘಕಾಲದ ಸಂಸದೀಯ ಪಟುವಾದ ರಾಷ್ಟ್ರೀಯ ಮುಖಂಡರಾದ ಜಗಜೀವನ ರಾಂ ಅವರ ನಿಧನಕ್ಕೆ ಸಿ. ಪಿ. ಐ (ಎಂ) ಕೇಂದ್ರ ಸಮಿತಿ ತೀವ್ರ ದುಃಖ ವ್ಯಕ್ತಪಡಿಸಿದೆ. ದೇಶದ ರಾಜಕೀಯ ಚಟುವಟಿಕೆಗಳಲ್ಲಿ ಜಗಜೀವನ ರಾಂ ಅವರು ಎದ್ದು ಕಾಣುವ ಪಾತ್ರ ವಹಿಸಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಸಾಮಾಜಿಕ ವಾಗಿ ಹಿಂದುಳಿದ ಜನರಿಗೆ ಇವರು ಹೆಚ್ಚು ಗಮನ ಹರಿಸುತ್ತಿದ್ದರು. ತಮ್ಮ ಜೀವನದಲ್ಲಿ ಇವರು ಹಲವಾರು ಪ್ರಮುಖ ಸ್ಥಾನಗಳಲ್ಲಿದ್ದರು.

ಅವರ ಪತ್ನಿ ಮತ್ತು ಕುಟುಂಬದವರ ದುಃಖದಲ್ಲಿ ಸಿ. ಪಿ. ಐ (ಎಂ) ಕೇಂದ್ರ ಸಮಿತಿ ಸಹಭಾಗಿಯಾಗಿದೆ.

ಇ. ಎಂ. ಎಸ್. ನಂಬೂದಿರಿಪಾದ್, ಬಿ. ಟಿ. ರಣದಿವೆ, ಸುರ್ಜಿತ್, ಸಮರ್ ಮುಖರ್ಜಿಯವರು ಜಗಜೀವನ್ ರಾಂ ಅವರ ಮನೆಗೆ ಹೋಗಿ ಸಂತಾಪ ವ್ಯಕ್ತಮಾಡಿದರು.

ಮತ್ತೆ ಬರಗಾಲದ ಭೀತಿಯೇ?

ಇನ್ನೊಂದು ವಾರದೊಳಗಾಗಿ ರಾಜ್ಯದಲ್ಲಿ ಅಭಾವ ಪರಿಹಾರ ಕಾಮಗಾರಿಗಳ ಮುಂದುವರಿಕೆಯ ಅಗತ್ಯವನ್ನು ಕುರಿತು ರಾಜ್ಯ ಸರಕಾರ ನಿರ್ಧಾರ ಮಾಡಲಿದೆ. ತಾ. 14ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರು ಕರೆದಸಂಸತ್ ಸದಸ್ಯರಸಭೆಯುಒಟ್ಟ ಅಭಿಪ್ರಾಯ ಮೇ ತಿಂಗಳ ಕೊನೆಯಲ್ಲಿ ಜೂನ್ ತಿಂಗಳ ಪ್ರಾರಂಭದಲ್ಲಿ ರಾಜ್ಯದ ಬಹಳಷ್ಟು ಭಾಗದಲ್ಲಿ ಒಳ್ಳೆ ಮಳೆಯಾಗಿ ಅನಂತರ ಮಳೆ ಕೈಕೊಟ್ಟದ್ದರಿಂದ ಈ ನಿರ್ಧಾರ. ಮಳೆಯಾದ ಕೂಡಲೇ ರೈತರು ಆನಂದದಿಂದ ಬೀಜ ಬಿತ್ತಿದ್ದಾರೆ. ಶೇ. 25ರಿಂದ 30ರಷ್ಟು ಪ್ರದೇಶದಲ್ಲಿ ಮಳೆಯಾಗದಿದ್ದರಿಂದ ಬೀಜ ಬಿತ್ತಲಿಲ್ಲ. ಹಳೇ ಮೈಸೂರು ಪ್ರದೇಶದಲ್ಲಿ ಸಾಕಷ್ಟು ಮಳೆಯಿಲ್ಲದೆ ಬೀಜ ಬಿತ್ತನೆ ಇನ್ನೂ ನಡೆದಿಲ್ಲ. 6-8 ಇಂಚು ಎತ್ತರಕ್ಕೆ ಬೆಳೆದು ನಿಂತ ಬೆಳೆಗೆ ಈಗ ಮಳೆ ಅತ್ಯಗತ್ಯ. ಮಳೆಯ ಅಭಾವ ಈಗ ರೈತರಲ್ಲಿ ಚಿಂತೆ ಉಂಟುಮಾಡಿದೆ.

ಯಾರನ್ನೂ ಹೇಳದೆ ಕೇಳದೆ ರಾಜ್ಯ ಸರಕಾರ ಜುಲೈ 1 ರಿಂದ ಬರಗಾಲ ಕಾಮಗಾರಿಯನ್ನು ನಿಲ್ಲಿಸಿದೆ, ಗೋಶಾಲೆಗಳನ್ನು ಮುಚ್ಚಿದೆ. ಮುಖ್ಯ ಮಂತ್ರಿಯವರ ಬರಗಾಲ ನಿಧಿಗೆ ಧನ ಸಹಾಯ ಕೊಡಬೇಡವೆಂದು ಸಾರಿದೆ. ಈ ಏಕಪಕ್ಷೀಯ ನಿರ್ಧಾರ ತಪ್ಪು. ವಿರೋಧ

ಎನ್. ಕೆ. ಉಪಾಧ್ಯಾಯ

ಪಕ್ಷಗಳನ್ನು, ರೈತಸಂಘಗಳನ್ನು ಕೇಳಿ ಈ ನಿರ್ಧಾರ ಕೈಗೊಳ್ಳಬೇಕಾಗಿತ್ತು.

ಬಿಜಾಪುರದಲ್ಲಿ ಈ ಕುರಿತು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ನಾನು ಚರ್ಚಿಸಿದೆ. ಮಂತ್ರಿ ಬೊಮ್ಮಾಯಿಯವರು ಬಂದರು, ಸಭೆ ಕರೆದರು, ಎಲ್ಲಾ ನಿಲ್ಲಿಸಬೇಕೆಂದು ಹೇಳಿದರು. ಮೇವು ಸಾಕಷ್ಟಿದ್ದರೂ ಗೋಶಾಲೆ ಮುಚ್ಚಿದೆವು. ಹಣವಿದ್ದರೂ ಬರ ಪರಿಹಾರ ಕಾರ್ಯ ನಿಲ್ಲಿಸಿದೆವು ಎಂದು ಅಧಿಕಾರಿಗಳ ಹೇಳಿಕೆ. ದೂರದೃಷ್ಟಿಯಿಲ್ಲದ ಮಂತ್ರಿಗಳು ಅವಸರವಸರದಲ್ಲಿ ನಿರ್ಣಯ ಮಾಡುತ್ತಾರೆ. ಜನರು ಕಷ್ಟಕ್ಕೊಳಗಾಗುತ್ತಾರೆ.

ಕರ್ನಾಟಕದಲ್ಲಿ ಸತತ ಎದುರಿಸುತ್ತಿರುವ ಬರಗಾಲ ನಿವಾರಣೆ ಮಾಡುವ ಸಲುವಾಗಿ ಕಳೆದ 30-40 ವರ್ಷಗಳಿಂದಲೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕಗಳು ಸರಕಾರಕ್ಕೆ ನಿರಂತರವಾಗಿ ಅತ್ಯಂತ ಉಪಯುಕ್ತವಾದ, ಫಲಕಾರಿಯಾದ, ಹಾಗೆಯೇ ಬರಗಾಲಕ್ಕೆ ಖರ್ಚುಮಾಡಬಹುದಾದ ಹಣದಿಂದಲೇ ಖಾಯಂ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವಂತೆ ಒತ್ತಾಯಪಡಿಸುತ್ತಾ ಬಂದಿದ್ದವು. ಹಿಂದಿನ ಕಾಂಗ್ರೆಸ್ ಸರಕಾರ ಅವುಗಳಿಗೆ ಹೆಚ್ಚಿನ ಗಮನ ಹರಿಸಿದ್ದಿಲ್ಲ. ಕೆಲವೆಡೆ ತೀವ್ರ ಹೋರಾಟ ನಡೆದಾಗ ಮಾತ್ರ ಸಲಹೆಗಳನ್ನು ಪರಿಗಣಿಸಿ ಕೆಲವು ಪರಿಹಾರ ಕಾಮಗಾರಿಗಳನ್ನು ಕೈಗೊಂಡಿತ್ತು. ಜನತಾ ಸರಕಾರ ಅಧಿಕಾರಕ್ಕೆ ಬಂದ ನಂತರವೂ ಸೂಚನೆಗಳನ್ನು ಸಲ್ಲಿಸಲಾಗಿದೆ, ಹೋರಾಟಗಳನ್ನು ಮಾಡಲಾಗಿದೆ. "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಎಂಬ ಗಾದೆಯಂತೆ ಕಾಂಗ್ರೆಸ್ಸಿನಂತೆಯೇ ಬಂಡವಾಳಶಾಹಿ ವರ್ಗಕ್ಕೆ ಸೇರಿದ ಜನತಾ ಸರಕಾರ ಕೂಡ ತನ್ನ ಕಾರ್ಯ ಪದ್ಧತಿಯಲ್ಲಿ ಬದಲಾವಣೆ ಮಾಡಲಿಲ್ಲ.

ಉಂಡು ತಿಂದು ಕೊಬ್ಬಿದ ಅಧಿಕಾರಿ ವರ್ಗ ಮಂತ್ರಿಗಳ ಕಣ್ಣಿಗೆ ಮಣ್ಣೆರಚುತ್ತಲೇ ಬಂದಿತ್ತು. "ಬರಗಾಲ ಪರಿಹಾರವೆಂದರೆ ಅಧಿಕಾರಿಗಳಅವರ ಚೇಲಾಗಳ ಪರಿಹಾರ" ವಾಗಿಯೇ ಮುಂದುವರಿಯಿತು, ಪ್ರತಿ ದಿನ ಖರ್ಚಾಗುವ ಕೋಟಿ ರೂಪಾಯಿಯಲ್ಲಿ ಕಾಲುಭಾಗವೂ ಅಭಿವೃದ್ಧಿ ಕಾರ್ಯಗಳಿಗಾಗಿ ಖರ್ಚಾಗಲಿಲ್ಲ. ಕಾರಣ ಬರಗಾಲಕ್ಕೆ ಸಮರ್ಪಕ ಪರಿಹಾರವೇ ಕಾಣದಂತಾಯಿತು.

ಈ ವರ್ಷ ಪ್ರಾಂತ ರೈತ ಸಂಘ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೆಯೇ ಸಾರ್ವಜನಿಕರ ಒತ್ತಡದಿಂದ ಬರಪರಿಹಾರ ಕಾರ್ಯದಲ್ಲಿ "ಸಾಸಿವೆ" ಯಷ್ಟು ಬದಲಾವಣೆ ಉಂಟು ಮಾಡಲು ಸಾಧ್ಯವಾಗಿದೆ. ಬರಗಾಲ ಕೆಲಸ ಎಂಥದ್ದಿರಬೇಕೆಂಬುದನ್ನು ತಿಳಿದುಕೊಳ್ಳುವಷ್ಟು "ಪುರುಸೊತ್ತು" ಮಂತ್ರಿಗಳಿಗಿಲ್ಲದಿದ್ದರೂ, ರೈತರ—ಜನರ ಒತ್ತಡಕ್ಕೆ ಮಣಿದ ಕೆಲವು ನಿಷ್ಠಾವಂತ ಅಧಿಕಾರಿಗಳು ಉಪಯುಕ್ತವಾದ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅದರಿಂದಾಗಿ ಸಾಧಾರಣವಾಗಿ ಖಾಯಂ ಪರಿಹಾರದ ಕೆಲವು ಕಾರ್ಯಗಳನ್ನಾದರೂ ಕೈಗೊಳ್ಳಲಿಕ್ಕೆ ಸಾಧ್ಯವಾಗಿದೆ. ಅಂಥ ಕೆಲಸಗಳನ್ನು ಮುಂದುವರಿಸಿ ಮುಕ್ತಾಯಗೊಳಿಸುವುದು ಸರಕಾರದ ಜವಾಬ್ದಾರಿ. ಆ ಜವಾಬ್ದಾರಿಯನ್ನು ಹೊರಲು ಸರಕಾರ ವಿಫಲವಾದರೆ ಚಳುವಳಿ ಮೂಲಕ "ಆ ಕೆಲಸ ಮುಗಿಸಿರಿ"

(8ನೇ ಪುಟ ನೋಡಿ)

ಓದುಗರ ಗಮನಕ್ಕೆ

ಮುದ್ರಣ ಯಂತ್ರದ ತೊಂದರೆಯಿಂದಾಗಿ ಕಳೆದ ಮತ್ತು ಈ ಸಂಚಿಕೆಯ ಮುಖ ಪುಟವನ್ನು "ಕೆಂಪು" ಬಣ್ಣದಲ್ಲಿ ಮುದ್ರಿಸಲಾಗಲಿಲ್ಲ.

— ಸಂ.

ಲೇ ಜ್ವಾನ್ ನಿಧನ-ಪಿ. ಬಿ. ಸಂತಾಪ

ವಿಯಟ್ ನಾಮ್ ಕಮ್ಯುನಿಸ್ಟ್ ಪಕ್ಷದ ಪ್ರ. ಕಾರ್ಯದರ್ಶಿ ಲೇ ಜ್ವಾನ್ ಅವರ ಮರಣಕ್ಕೆ ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ ತನ್ನ ಅಪಾರ ದುಃಖವನ್ನು ವ್ಯಕ್ತಮಾಡಿದೆ. ವಿಯತ್‌ನಾಮ್ ಜನತೆಗೂ, ಪಕ್ಷಕ್ಕೂ, ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಗೂ ಅವರ ಮರಣದಿಂದ ಅಪಾರ ಹಾನಿಯಾಗಿದೆ. ತಮ್ಮ ಐದು ದಶಕಗಳ ಕ್ರಾಂತಿಕಾರಿ ಜೀವನವನ್ನು ರಾಷ್ಟ್ರೀಯ ವಿಮೋಚನೆಯು, ಸಮಾಜವಾದ ರಚನೆಯ ಚರಿತ್ರಾರ್ಹ ಹೋರಾಟದಲ್ಲಿ ವಿಯತ್‌ನಾಮ್ ಜನತೆಯೊಡನೆ ಸಂಪೂರ್ಣ ಬೆರೆಸಿಕೊಂಡಿದ್ದರು.

1960 ರಲ್ಲಿ ಪಕ್ಷದ 3ನೇ ಕಾಂಗ್ರೆಸ್ಸಿನಲ್ಲಿ ಪ್ರಥಮ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟು, ಅಮೇರಿಕದ ಆಕ್ರಮಣ ಮತ್ತು ವಿಯತ್‌ನಾಮಿನ ಯುದ್ಧದ ಕಷ್ಟದ ದಿನಗಳಲ್ಲಿ ಹೊಚಿಮಿನ್ ಅವರ ಜೊತೆಯಲ್ಲಿ ಕೆಲಸ ಮಾಡುತ್ತ ತಪ್ಪ ಜವಾಬ್ದಾರಿಯನ್ನು ಪ್ರಶಂಸನೀಯವಾಗಿ ಹೊತ್ತಿದ್ದರು. ವಿಯತ್ ನಾಮಿನ ದೇಶಪ್ರೇಮದ ಅತ್ಯುತ್ತಮ ಪರಂಪರೆಯ ಪ್ರತೀಕವಾಗಿರುವ, ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಸಿದ್ಧಾಂತದ ಮೂರ್ತಸ್ವರೂಪರಾದ ಲೇ ಜ್ವಾನ್ ಅವರು ಹೊಚಿಮಿನ್ ಅವರ ಮರಣದ ನಂತರ ಪಕ್ಷದ ಮುಖಂಡತ್ವದ ಮತ್ತು ವಿಯತ್‌ನಾಮ್ ಜನತೆಯ ಆಶೋತ್ತರಗಳಿಗನುಸರಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಭೀಕರ ಹೋರಾಟ ನಡೆಸಿ, ದೇಶವನ್ನ ಒಂದಾಗಿಸಿದರು. 1975ರಲ್ಲಿ ವಿಯತ್ ನಾಮನ್ನು ಒಂದುಗೂಡಿಸಿದ ನಂತರ ಲೇ ಜ್ವಾನ್‌ಅವರು ಪಕ್ಷ ಹಾಗೂ ಜನತೆಯನ್ನು ದೇಶದ ಪುನರ್ನಿರ್ಮಾಣ ಕಾರ್ಯದಲ್ಲಿ ತೊಡಗಿಸಿದರು. 26 ವರ್ಷಗಳ ಕಾಲಅವರುಪಕ್ಷದ ಅತ್ಯುಚ್ಚ ಸ್ಥಾನದಲ್ಲಿದ್ದರು. ತಮ್ಮ ಕೊನೆಯ ವರ್ಷಗಳಲ್ಲಿ ಅವರು ಯುದ್ಧದಿಂದ ಹಾಳಾದ ಆರ್ಥಿಕತೆಯನ್ನು ಸುಧಾರಿಸಲು ಸಾಮ್ರಾಜ್ಯ ಶಾಹಿಗಳ ಕೈವಾಡದಿಂದ ಪಾರುಮಾಡಿ ವಿಯತ್ ನಾಮ್ ಮತ್ತು ಇಂಡೋಚೀನಾಗಳಲ್ಲಿ ಶಾಶ್ವತ ಶಾಂತಿ ನೆಲಸುವಂತೆ ಮಾಡಲು ದುಡಿದರು.

ಅವರು ಭಾರತದಜನತೆಯ ಹಾಗೂ ಕಮ್ಯುನಿಸ್ಟ್ ಚಳುವಳಿಯ ಆತ್ಮೀಯ ಗೆಳೆಯರಾಗಿದ್ದರು. ಎರಡು ವರ್ಷಗಳ ಹಿಂದೆ ಅವರು ಭಾರತ ಸಂದರ್ಶಿಸಿದಾಗ ಆತ್ಮೀಯತೆ ಮತ್ತೂ ಗಾಢವಾಗಿತ್ತು. ಅವರ ಮರಣ, ಸ್ವಾತಂತ್ರ್ಯ ಪ್ರೇಮಿ ಭಾರತದ ಜನತೆಗೆ ಬಹಳ ದುಃಖವನ್ನುಂಟುಮಾಡಿದೆ.

ವಿಯತ್ ನಾಮ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಗೆ, ವಿಯತ್ ನಾಮಿನ, ಜನತೆಗೆ ಹಾಗೂ ಅವರ ಕುಟುಂಬದವರಿಗೆ, ಸಿ. ಪಿ. ಐ. (ಎಂ) ತನ್ನ ಅತೀವ ದುಃಖ ವ್ಯಕ್ತಮಾಡುತ್ತದೆ.

ಸುದ್ದಿ-ಸಮಾಚಾರ

ವಿವಿಧ ರಾಜ್ಯಗಳಲ್ಲಿ

ತ್ರಿಪುರಾ

ಕೃಷಿ ಕಾರ್ಮಿಕರ ಹೋರಾಟದ ಮುನ್ನಡೆ

ಅಖಿಲಭಾರತ ಕೃಷಿಕಾರ್ಮಿಕರ ಸಂಘದಆರುಅಂಶಗಳ ಒತ್ತಾಯಗಳನ್ನು ಕುರಿತು ಜೂನ್ ತಿಂಗಳ ಕಾರ್ಯಕ್ರಮದ ಅಂಗವಾಗಿ ತ್ರಿಪುರಾದ ಎಲ್ಲಾ ತಾಲ್ಲೂಕುಗಳಲ್ಲಿ ಧರಣಿ ಸತ್ಯಾಗ್ರಹ ವ್ಯಾಪಕವಾಗಿ ನಡೆಯಿತು. ಆರು ಅಂಶಗಳ ಬೇಡಿಕೆಯ ಜತೆಗೆ ತ್ರಿಪುರಾದ ಬರ ಹಾಗೂ ಬಿರುಗಾಳಿ ಪೀಡಿತರಿಗೆ ಕೇಂದ್ರ ಸರಕಾರ ನೆರವು ನೀಡಬೇಕೆಂಬ ಒತ್ತಾಯವೂ ಸೇರಿತ್ತು.

ಕೃಷಿ ಕಾರ್ಮಿಕರನ್ನು ಕುರಿತಾದ ಒಂದು ಶಾಸನವನ್ನು ತ್ರಿಪುರಾ ರಾಜ್ಯ ಸರಕಾರ ರೂಪಿಸಿದೆಯಾದರೂ ಇಂತಹುದೇ ಶಾಸನವನ್ನು ದೇಶಾದ್ಯಂತ ಜ್ಯಾರಿಯಾಗುವಂತೆ ಕೇಂದ್ರ ಸರಕಾರ ರೂಪಿಸಬೇಕೆಂಬುದು ಮೊದಲಬೇಡಿಕೆ. ಭೂಹೀನರಿಗೆ ನಿವೇಶನ ಹಾಗೂ ಗ್ರಾಮಾಂತರ ಬಡವರಿಗೆ ಕುಡಿಯುವ ನೀರು ಇದು ಎರಡನೇ ಬೇಡಿಕೆ. ಇದನ್ನೂ ಕೂಡಾ ತ್ರಿಪುರಾ ಸರಕಾರ ಈಗಾಗಲೇ ಜ್ಯಾರಿಗೆ ತಂದಿದ್ದರೂ ದೇಶಾದ್ಯಂತ ಇದು ಜ್ಯಾರಿಗೆ ಬರಬೇಕೆಂಬುದು ಧರಣಿಯ ಒತ್ತಾಯವಾಗಿತ್ತು. ತ್ರಿಪುರಾದಲ್ಲಿ ಹರಿಜನ, ಗಿರಿಜನರ ಮೇಲೆ ಅತ್ಯಾಚಾರಗಳ ಘಟನೆಯೇ ನಡೆಯುವುದಿಲ್ಲ. ಆದರೆ ದೇಶದ ಇತರ ಹಲವೆಡೆ ಈಗಲೂ ಅವ್ಯಾಹತವಾಗಿ ನಡೆಯುತ್ತಿವೆ. 50 ಜನರನ್ನು ಕೊಂದ ಬಿಹಾರಿನಅರ್ವಾಲ್ ಹತ್ಯಾಕಾಂಡ ಇತ್ತೀಚಿನ ಒಂದು ಪ್ರಮುಖ ಉದಾಹರಣೆಯಷ್ಟೆ. ಧರಣಿ ಸತ್ಯಾಗ್ರಹಿಗಳು ಇದನ್ನು ತೀವ್ರವಾಗಿ ಖಂಡಿಸಿದರು.

ಕೃಷಿ ಕಾರ್ಮಿಕರಿಗೆ ಇಳಿವಯಸ್ಸಿನ ಪಿಂಚಣಿ [ವಿರಾಮ ವೇತನ], ಕನಿಷ್ಟ ಕೂಲಿಯ ಪರಿಷ್ಕರಣ ಹಾಗೂ ತಕ್ಷಣ ಜ್ಯಾರಿ ಮತ್ತು ನ್ಯಾಯಬೆಲೆ ಅಂಗಡಿಗಳ ಮೂಲಕ ಇಳಿಸಿದ ದರಗಳಲ್ಲಿ 14 ಜೀವನಾವಶ್ಯಕ ಸಾಮಗ್ರಿಗಳ ವಿತರಣೆ ಧರಣಿಯ ಇತರ ಬೇಡಿಕೆಗಳು. ಇವನ್ನು ತ್ರಿಪುರಾ ಎಡರಂಗ ಸರ್ಕಾರ ಸ್ವಲ್ಪ ಮಟ್ಟದ ವರೆಗೆ ಜ್ಯಾರಿಗೊಳಿಸಿದ್ದರೂ ಅದನ್ನು ಪೂರ್ಣ ರೀತಿಯಲ್ಲಿ ಜ್ಯಾರಿಗೆ ತರಲು ಕೇಂದ್ರ ಸರಕಾರ ನೆರವು ನೀಡಬೇಕೆಂದು ಧರಣಿ ಸತ್ಯಾಗ್ರಹ ನಡೆಸಿದ ಕೃಷಿ ಕಾರ್ಮಿಕರು ಒತ್ತಾಯಿಸಿದರು.

ಒಂದೂವರೆ ತಿಂಗಳ ಪ್ರಚಾರ, ಪ್ರಕ್ಷೋಭೆ ಹಾಗೂ ಆಂದೋಲನ ಹಳ್ಳಿಯ ಬಡವರಲ್ಲಿ, ಮುಖ್ಯವಾಗಿ ಕೃಷಿ ಕಾರ್ಮಿಕರಲ್ಲಿ ತಮ್ಮ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೆ ಮತ್ತಷ್ಟು ಹೋರಾಟ ನಡೆಸುವ ಹೊಸ ಉತ್ಸಾಹ ತುಂಬಿತು. ○

ಬಿಹಾರ

ಕಾಂಗ್ರೆಸ್(ಐ)ರಾಜಕಾರಣಿಗಳಿಂದ ಅವ್ಯಾಹತ ಕಿರುಕುಳ

ಕ್ರಿಮಿನಲ್ ವ್ಯಕ್ತಿಗಳನ್ನು ಹಾಗೂ ಸಮಾಜ ಘಾತುಕರನ್ನು ಕಾನೂನಿನ ಕ್ರಮಗಳಿಂದ ತಪ್ಪಿಸಲು ಕಾಂಗ್ರೆಸ್ (ಐ) ಮಂತ್ರಿಗಳು, ಎಂ.ಪಿ ಗಳುಮತ್ತು ಎಂ.ಎಲ್.ಎ ಗಳು ಅನವಶ್ಯಕವಾಗಿ ಮೂಗು ತೂರಿಸಿ ತೊಂದರೆಮಾಡುತ್ತಾರೆಂದು ಹಲವಾರು ಐ ಎ. ಎಸ್., ಐ. ಪಿ. ಎಸ್. ಅಧಿಕಾರಿಗಳು ಬಿಹಾರ ಸರ್ಕಾರಕ್ಕೆ ದೂರಿತ್ತಿದ್ದಾರೆ. ಜಿಲ್ಲಾ ಆಡಳಿತಗಳಲ್ಲೂ ಕಾಂಗ್ರೆಸ್ (ಐ) ಮುಖಂಡರು ಅನವಶ್ಯಕ ಹಸ್ತಕ್ಷೇಪ ಮಾಡಿರುವ ಬಗ್ಗೆ ಹಲವಾರು ದೂರುಗಳಿವೆ.

ಬೇಗುಸರಾಯ್ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್ ಅರವಿಂದ ವರ್ಮಾ ಡಿ ಐ ಜಿ ಗೆ ಬರೆದ ಪತ್ರದ ಪ್ರಕಾರ ಫೆಬ್ರುವರಿ 10ರಂದು ಮಾಜೀಮಂತ್ರಿ ಭೋಲಾಸಿಂಗ್ ತಮ್ಮ ಬೆಂಬಲಿಗರೊಂದಿಗೆ ಕುಖ್ಯಾತ ಕ್ರಿಮಿನಲ್ ಹಾಗೂ ಕೋರ್ಟಿನ ಅರೆಸ್ಟ್ ವಾರೆಂಟಿದ್ದ ರಾಂಉದಯ್‌ಸಿಂಘ್‌ನನ್ನು ಬಿಡುಗಡೆ ಮಾಡುವಂತೆ ಗಲಾಟೆಮಾಡಿದರು. ತನ್ನ ಭಾವ-ಮೈದುನನನ್ನು ಬಿಡುಗಡೆ ಮಾಡಲು ಕೂಡಾಭೋಲಾಸಿಂಘ್ ಇದೇ ರೀತಿ ಜಿಲ್ಲಾ ಆಡಳಿತದ ಕಾರ್ಯನಿರ್ವಹಣೆಗೆ ಅಡ್ಡಿ ಮಾಡಿದರೆಂದು ವರ್ಮಾ ದೂರಿದ್ದಾರೆ.

ಇದೇ ರೀತಿ ಗಯಾ ಜಿಲ್ಲೆಯ ಸಿ. ಐ. ಡಿ ಸೂಪರಿಂಟೆಂಡೆಂಟ್ ಶಿವಚಂದ್ರ ರಝಾ, ಬೇಗುಸರಾಯ್ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಮಸೇವಕ್ ಶರ್ಮಾ ಹಾಗೂ ಇತರ ಹಲವಾರು ಅಧಿಕಾರಿಗಳು ದೂರಿತ್ತಿದ್ದಾರೆ, ಆಳುವ ಪಕ್ಷದ ದುಷ್ಕೃತ್ಯಗಳ ವಿರುದ್ಧ ದನಿಯೆತ್ತಿದ ಹೆಚ್ಚಿನ ಪೋಲೀಸ್ ಅಧಿಕಾರಿಗಳನ್ನು, ಜಿಲ್ಲಾ ಅಧಿಕಾರಿಗಳನ್ನು ಹುಚ್ಚಾಪಟ್ಟೆ ವರ್ಗಾಯಿಸಿ, ಬಡ್ತಿ ತಡೆದು, ಶೋಕಾಸ್ ನೋಟೀಸು ಜ್ಯಾರಿ ಮಾಡಿ ಸತಾಯಿಸಲಾಗುತ್ತಿದೆ.

ತಮಿಳುನಾಡು

ಎಂ.ಜಿ.ಆರ್.ಸರಕಾರದನಿರ್ಲಕ್ಷ್ಯದ ವಿರುದ್ಧ ಹೋರಾಟ

ಕರ್ನಾಟಕದಂತೆ ತಮಿಳುನಾಡು ಕೂಡಾ ಕಳೆದ ಮೂರು ವರ್ಷಗಳಿಂದ ಬರಗಾಲ ಎದುರಿಸುತ್ತಿದ್ದು, ಈ ವರ್ಷ ಅದು ತೀವ್ರಗೊಂಡಿತ್ತು. ಆದರೆ ಎಂ.ಜಿ.ಆರ್. ಸರ್ಕಾರ ಬರಪೀಡಿತರಿಗೆ ಪರಿಹಾರ ಕಾರ್ಯ ಕೈಗೊಳ್ಳುವುದು ಬಿಟ್ಟು ಕಡ್ಡಾಯ ಸಾಲ ವಸೂಲಿಗೆ ಜಪ್ತಿಯ ಮೂಲಕ ಪೀಡಿತರನ್ನು ಮತ್ತಷ್ಟು ಸಂಕಷ್ಟಕ್ಕೆ ಒಳಪಡಿಸಲಾರಂಭಿಸಿತು. ಈ ಕಠಿಣ ಧೋರಣೆಯ ವಿರುದ್ಧ ಹಾಗೂ ರೈತರನ್ನು ರಕ್ಷಿಸಲು ತಮಿಳುನಾಡು ಕಿಸಾನ್‌ಸಭಾ, ಜನತಾ ಪಕ್ಷದ ಕಿಸಾನ್ ಸಂಘಟನೆ ಹಾಗೂ ರೈತ-ದುಡಿಮೆಗಾರ ಪಕ್ಷದ ಜತೆಗೂಡಿ ಎಲ್ಲಾ ಜಪ್ತಿ ಕ್ರಮಗಳನ್ನು ನಿಲ್ಲಿಸಬೇಕೆಂದು, ಬರಪೀಡಿತ ರೈತರಿಂದ ಕರ, ಬಡ್ಡಿ ಹಾಗೂ ಚಕ್ರಬಡ್ಡಿಯಿಂದ ವಿನಾಯ್ತಿ ನೀಡಬೇಕೆಂದು ಒತ್ತಾಯಿಸಿ ಜಂಟಿ ಆಂದೋಲನ ನಡೆಸಲು ನಿರ್ಧರಿಸಿತು. ಅಲ್ಲದೆ ಬರಗಾಲದ ಮೊದಲ ವರ್ಷದಲ್ಲೇ ರೈತರ ಸಮಸ್ಯೆಗಳನ್ನು ಅಧ್ಯಯನ ಮಾಡಲು ನೇಮಿಸಲ್ಪಟ್ಟ ಸಮಿತಿ ಸರಕಾರ ರೈತರಿಂದ ಬಡ್ಡಿ ಹಾಗೂ ಚಕ್ರಬಡ್ಡಿ ತಗೊಳ್ಳುವುದನ್ನು ಸಾಲದ ಮರುಪಾವತಿ ಪಡೆಯುವುದನ್ನು ನಿಲ್ಲಿಸಬೇಕೆಂದು ಶಿಫಾರಸು ಮಾಡಿತು. ಈ ಶಿಫಾರಸು ಒಂದು ಎರಡು ವರ್ಷಗಳ ಮೇಲಾದರೂ ಇನ್ನೂ ಅದನ್ನು ಎಂ,ಜಿ.ಆರ್. ಸರಕಾರ ಸ್ವೀಕರಿಸಿಲ್ಲ. ಇದನ್ನು ಸ್ವೀಕರಿಸಬೇಕೆಂದು ಕೂಡಾ ಒತ್ತಾಯಿಸಲಾಗಿತ್ತು. ಸಿ.ಪಿ.ಐ ನೇತೃತ್ವದ ಕಿಸಾನ್ ಸಭಾ ಕೂಡಾ ಇದನ್ನು ಬೆಂಬಲಿಸಿತ್ತು.

ಈ ಆಂದೋಲನದ ಫಲವಾಗಿರಾಜ್ಯ ಸರಕಾರ ಹನ್ನೊಂದು ಜಿಲ್ಲೆಗಳನ್ನು ಬರಪೀಡಿತವೆಂದು ಘೋಷಿಸಿ ಸಾಲ ವಸೂಲಿ, ಜಪ್ತಿಯನ್ನು ನಿಲ್ಲಿಸುವುದಾಗಿ ಹೇಳಿತು. ಆದರೂ ಜಪ್ತಿಯಾಗುವುದು ಮಾತ್ರ ನಿಲ್ಲಲಿಲ್ಲ. ಈ ಸಮಸ್ಯೆಗಳನ್ನು ಪರಿಹರಿಸಲು ಸರಕಾರ ಸಿದ್ಧವಿಲ್ಲವೆಂಬುದನ್ನು ಕಂಡ ಕಿಸಾನ್‌ಸಭಾ ಉಳಿದ ಸಂಘಟನೆಗಳು ಹೇಳಿಕೆಕೊಟ್ಟ ನಂತರ ಆಂದೋಲನದಿಂದ ಹಿಂತೆಗೆದರೂ ತಾನು ಆಂದೋಲನ ಮುಂದುವರಿಸಲು ನಿರ್ಧರಿಸಿತು.

ಇದರ ಪ್ರಕಾರ ಜೂನ್ 16 ರಂದು ರಾಜ್ಯಾದ್ಯಂತ ಸಾವಿರಾರು ರೈತರು ಹೆಂಗಸರು, ಗಂಡಸರು ವಿವಿಧ ಜಿಲ್ಲೆಗಳಲ್ಲಿ ಸುಮಾರು 200 ಕೇಂದ್ರಗಳಲ್ಲಿ ಸರಕಾರೀ ಕಚೇರಿಗಳ ಪಿಕೆಟಿಂಗ್ ನಡೆಸಿದ್ದು ಪಿಕೆಟಿಂಗ್ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತೆಂದು ವಿವಿಧ ಕೇಂದ್ರಗಳಿಂದ ಬಂದ ವರದಿಗಳಿಂದ ತಿಳಿದು ಬಂದಿದೆ. ○

ಮಹಿಳೆಯರು ಪೋಲೀಸರ ಗೂಂಡಾಗಿರಿ ಎದುರಿಸಿದರು

ಬಿಹಾರ್ ರಾಜ್ಯದ ವೈಶಾಲಿಯ ಗೋರೋಲ್ ಠಾಣಾದ ಜಮೀಂದಾರ ಹಫೀಜುಲ್ ರಹಮಾನ್ ಖಾಜ್ ಚಾಂದ್ ಛಪಡಾ ಎಂಬ ಹಳ್ಳಿಯಲ್ಲಿ ಪೋಲೀಸ್ ಪಡೆಯ ನೆರವು ಪಡೆದು ಜೂನ್ 6ರಂದು ಹಿಂದುಳಿದ ಜಾತಿಯ ಕುಟುಂಬಗಳ ಮನೆಗಳಿಗೆ ಬೆಂಕಿಹಚ್ಚಿಸಿದ. ಈ ಅಗ್ನಿಕಾಂಡದಲ್ಲಿ ಐದು ಮನೆಗಳು ಸುಟ್ಟು ಬೂದಿಯಾದವು. ಈ ಮನೆಗಳ ಬಡ ಮಹಿಳೆಯರು ಈ ಗೂಂಡಾಗಿರಿ ನಡೆಸಿದವರನ್ನು ಧೈರ್ಯದಿಂದ ಎದುರಿಸಿದರು. ಪೋಲೀಸರು ದೇವಕಲಿ ಎಂಬ ಮಹಿಳೆಯನ್ನು ಹೊಡೆದು ಮೂರ್ಛಿತಗೊಳಿಸಿದ್ದನ್ನು ಕಂಡಾಗ ಊರಿನ ಎಲ್ಲಾ ಹೆಂಗಸರು, ಗಂಡಸರು ಎದ್ದು ನಿಂತರು. ಕೊನೆಗೆ ಪೋಲೀಸ್ ಮತ್ತು ಜಮೀಂದಾರ ಅಲ್ಲಿಂದ ಕಾಲುಕೀಳಬೇಕಾಗಿ ಬಂತು. ದೇವಕಲಿಯನ್ನು ಊರಿನ ಜನ ಆಸ್ಪತ್ರೆಗೆ ಸೇರಿಸಿದರು.

ಜನವಾದಿ ಮಹಿಳಾ ಮೋರ್ಚಾಗೆ ಈ ಸುದ್ದಿ ತಲುಪಿ ಮೋರ್ಚಾದ ಕಾರ್ಯಕರ್ತರು ಆಸ್ಪತ್ರೆಯಲ್ಲಿ ದೇವಕಲಿಯನ್ನು ಭೇಟಿಯಾದರು. ಜೂನ್ 12 ರಂದು ಖಾಜ್‌ಚಾಂದ್ ಛಪಡಾದಲ್ಲಿ ಮಹಿಳಾ ಮೋರ್ಚಾ ಮತ್ತು ಸಿ.ಪಿ.ಐ [ಎಂ] ಘಟಕ ಸಾರ್ವಜನಿಕ ಸಭೆ ನಡೆಸಿ ಈ ಗೂಂಡಾಗಿರಿಯನ್ನು, ಜಮೀಂದಾರ-ಪೋಲೀಸರ ದುಷ್ಟಕೂಟವನ್ನು ತೀವ್ರವಾಗಿ ಖಂಡಿಸಿ, ಇದನ್ನು ಬಲವಾಗಿ ಪ್ರತಿಭಟಿಸಲು ಕರೆನೀಡಲಾಯಿತು.

ಮಂಗಳೂರು

ಬೀಡಿ ಕಾರ್ಮಿಕರ ಸಭೆ

ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಮಹಾ ಸಭೆ ಕೆ ಆರ್. ಶ್ರೀಯಾನ್ ಅವರ ಅಧ್ಯಕ್ಷತೆಯಲ್ಲಿ ನಡೆದು, ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕು, ವಾರದಲ್ಲಿ ಆರು ದಿವಸ ಸರಿಯಾಗಿ ಕೆಲಸ ಸಿಗಬೇಕು, ಕೆಲಸ ಇಲ್ಲದ ಸಮಯದಲ್ಲಿ ಪರಿಹಾರ ದೊರೆಯಬೇಕು, ವೇಜ್‌ಸ್ಲಿಪ್ ಕೊಡಬೇಕು, ಕನಿಷ್ಟ ಕೂಲಿ ಜಾರಿಗೆ ಬರಬೇಕೆಂದು ಕೇಳುವ ನಿರ್ಣಯಗಳು ಸಭೆಯಲ್ಲಿ ಪಾಸಾದವು. ಮುಂದಿನ ವರ್ಷಕ್ಕೆ ಸಿ. ನಾರಾಯಣ ಅಧ್ಯಕ್ಷರಾಗಿಯೂ, ಉಪಾಧ್ಯಕ್ಷೆಯಾಗಿ ಶ್ರೀಮತಿ ಸುಜಾತ, ಕಾರ್ಯದರ್ಶಿಯಾಗಿ ಬಾಬು ದೇವಡಿಗ ಜೊತೆ ಕಾರ್ಯದರ್ಶಿಯಾಗಿ ಯಮುನಾ ಸಾಲಿಯಾನ್ ಕೋಶಾಧಿಕಾರಿಯಾಗಿ ವಿಶ್ವನಾಥ್ ಸಾಲಿಯಾನ್, ಅವರನ್ನು ಆರಿಸಲಾಯಿತು,

ಬೀಡಿ ಕಾರ್ಮಿಕರಾದ ದೇವಾಡಿಗ ಕುಟುಂಬದವರ ಮೇಲೆ ಗುಂಡಾಜನರು ನಡೆಸಿದ ಅತ್ಯಾಚಾರದ ವಿರುದ್ಧ ಕಂಕನಾಡಿ ಪೋಲೀಸ್ ಸ್ಟೇಶನ್ನಿನ ಅಧಿಕಾರಿಗಳಿಗೆ ಹಲವಾರು ದೂರಿತ್ತರೂ ಕೂಡ ಯಾವುದೇ ಕ್ರಮ ತೆಗೆದುಕೊಳ್ಳದಿರುವುದರ ವಿರುದ್ಧ ಮೇಲಧಿಕಾರಿಗಳಿಗೆ ಅರ್ಜಿ ಸಲ್ಲಿಸಲಾಗಿದೆ.

ದ. ಕ. ಜಿಲ್ಲಾ ಕಾರ್ಮಿಕರಿಂದ ರೈತರಿಗೆ ಸಹಾಯ

ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಯಶಸ್ವಿಗೊಳಿಸಲು ಸಂಘಟಿತ ಕಾರ್ಮಿಕ ವರ್ಗದ ಜೊತೆಯಲ್ಲಿ ರೈತರು ಸೇರಿಕೊಳ್ಳಬೇಕಾಗಿರುವುದು ಅಗತ್ಯ. ಕಳೆದ 35 ವರ್ಷಗಳಿಗಿಂತಲೂ ಹೆಚ್ಚು ಕಾಲ ಹಲವಾರು ಹೋರಾಟಗಳನ್ನು ನಡೆಸಿ ರೈತನಿಗೆ ಭೂಮಿ ಹಕ್ಕು ಸಿಗುವಂತೆ ಭೂ ಸುಧಾರಣೆ ಕಾನೂನಿನಲ್ಲಿ ತಿದ್ದುಪಡಿ ಮಾಡಿಸುವುದರಲ್ಲಿ ಪ್ರಾಂತ ರೈತಸಂಘ ಯಶಸ್ವಿಯಾಗಿದೆ ನಿಜ. ಆದರೆ ಸಮಗ್ರ ಕೃಷಿಕ್ರಾಂತಿ ಸಾಧಿಸಲಿಕ್ಕೆ ಬೇಕಾದ ಸಂಘಟನಾ ಶಕ್ತಿ ದ. ಕ. ಜಿಲ್ಲೆಯ ರೈತರಲ್ಲಿ ಇನ್ನೂ ಬೆಳೆದು ಬಂದಿಲ್ಲ. ಆದ್ದರಿಂದ ರೈತ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಜಿಲ್ಲೆಯ ಸಿ. ಐ ಟಿ. ಯು. ಸಮಿತಿ ಕಾರ್ಮಿಕರಿಂದ ರೂ. 5262 ಸಂಗ್ರಹಿಸಿ ಜಿಲ್ಲಾ ರೈತ ಸಂಘಕ್ಕೆ ಅರ್ಪಿಸಿದೆ. ಕಾರ್ಮಿಕರ ಈ ಪ್ರಶಂಸನೀಯ ಕಾರ್ಯಕ್ಕೆ ರೈತ ಸಂಘ ಅಭಿನಂದನೆಗಳನ್ನು ಸಲ್ಲಿಸಿದೆ.

ಸತ್ಯಾಗ್ರಹ

ಧಾರವಾಡದ ಹತ್ತಿರದ ಸತ್ತೂರಿನಲ್ಲಿರುವ ಮೀನಾಕ್ಷಿ ಆಯಿಲ್ ಆಂಡ್ ಪ್ರೊಟೀನ್‌ಎಕ್ಸ್‌ಟ್ರ್ಯಾಕ್ಟ್ಸ್‌ಕಾರ್ಖಾನೆಯಲ್ಲಿ ಸುಮಾರು 50 ಕಾರ್ಮಿಕರು ಕೆಲಸ ಮಾಡುತ್ತಿದ್ದು, 4 ತಿಂಗಳಿಂದ ಕಾರ್ಮಿಕರಿಗೆ ಸಂಬಳ ಕೊಡದೆ ವಂಚಿಸುತ್ತಿರುವುದರ ವಿರುದ್ಧ ಸಂಘದ ಅಧ್ಯಕ್ಷರಾದ ವಿ. ಎನ್. ಹಳಕಟ್ಟಿಯವರ ನೇತೃತ್ವದಲ್ಲಿ ಜುಲೈ 14ರಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸರತಿ ಅನ್ನ ಸತ್ಯಾಗ್ರಹವನ್ನು ನಡೆಸಲಾಗುತ್ತಿದೆ.

ಆರ್ಥಿಕ ಸಮೀಕ್ಷೆ :

ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತದ್ವಾರ !

ರಾಜೀವ ಗಾಂಧಿಯ ನೂತನ ಆರ್ಥಿಕ ನೀತಿ ಸಾರ್ವಜನಿಕ ರಂಗವನ್ನು ಕಡೆಗಣಿಸಿ ಖಾಸಗೀ ರಂಗವನ್ನು ಪ್ರೋತ್ಸಾಹಿಸುತ್ತಾ, ಹಂತ ಹಂತವಾಗಿ ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳಿಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೂ ಮುಕ್ತ ದ್ವಾರ ನೀಡುತ್ತಿದೆ. ಪರಿಣಾಮವಾಗಿ, ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯಕ್ಕೆ, ಸ್ವಾವಲಂಬನೆಗೆ ತೀವ್ರ ಅಪಾಯ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಕೇಂದ್ರ ಸರಕಾರ 'ತೈಲ ಶೋಧನೆ' ಮತ್ತು 'ತಾಂತ್ರಿಕ ಸಲಹೆ' ಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಉದಾರ ಪ್ರವೇಶ ನೀಡಿರುವ ಎರಡು ವಿದ್ಯಮಾನಗಳ ಕುರಿತು ಇಲ್ಲಿ ಗಂಭೀರವಾಗಿ ಪರಿಶೀಲಿಸಲಾಗಿದೆ.

ತೈಲ ಶೋಧನೆಯಲ್ಲಿ ಬಹು ರಾಷ್ಟ್ರೀಯ ಸಂಸ್ಥೆಗಳು :

ಭಾರತ ಇಂಧನ ಬಳಕೆಯಲ್ಲಿ ಜಾಗತಿಕ ಸರಾಸರಿಯ ಎರಡನೇ ಒಂದು ಭಾಗದಷ್ಟೇ ಹೊಂದಿದ್ದು ಅತ್ಯಂತ ಹಿಂದುಳಿದಿದೆ. ಇಂಧನ ಬಳಕೆಯ ಪ್ರಮಾಣವು ಆರ್ಥಿಕ ಅಭಿವೃದ್ಧಿಯ ಒಂದು ಮುಖ್ಯ ಸೂಚಿಯಾಗಿದೆ. ಇಂಧನಗಳಲ್ಲಿ ಕಲ್ಲಿದ್ದಲು, ವಿದ್ಯುತ್ ಗಳಂತೆ ತೈಲ ಬಳಕೆಯೂ (ಪೆಟ್ರೋಲಿಯಂ ಪದಾರ್ಥಗಳು) ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಸ್ವಾತಂತ್ರ್ಯದ ನಂತರ ತೈಲ ಉದ್ಯಮದ ಅಭಿವೃದ್ಧಿಗೆ– ಶೋಧನೆ, ಉತ್ಪಾದನೆ, ಶುದ್ಧೀಕರಣ, ವಿತರಣೆಗಳಿಗೆ – ಸಾರ್ವಜನಿಕ ರಂಗದಲ್ಲಿ ಸ್ಥಾಪಿತವಾದ 'ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ' (ONGC) ಮತ್ತು "ಭಾರತ ತೈಲ ಸಂಸ್ಥೆ" (OIL) ಗಳಿಗೆ ಸೋವಿಯತ್ ದೇಶ ಸತತವಾಗಿ ತಾಂತ್ರಿಕ ಹಾಗೂ ಸಂಪನ್ಮೂಲಗಳ ನೆರವು ನೀಡುತ್ತಾ ಬಂದಿದೆ. ಭಾರತ ಆದಷ್ಟು ಬೇಗ ತೈಲ ಉದ್ಯಮದಲ್ಲಿ ಸ್ವಾವಲಂಬನೆ ಸಾಧಿಸಲು ಸಹಕರಿಸುತ್ತಿದೆ.

ಈ ಎರಡೂ ಸಾರ್ವಜನಿಕ ತೈಲ ಸಂಸ್ಥೆಗಳು ಕಳೆದ ನಾಲ್ಕು ದಶಕಗಳಲ್ಲಿ ಗಣನೀಯ ಸಾಧನೆ ಮಾಡಿವೆ. ಆರನೇ ಯೋಜನೆಯಲ್ಲಿ (1980–85) ದೇಶದ ವಾರ್ಷಿಕ ತೈಲ ಉತ್ಪಾದನೆ ಈ ಸಂಸ್ಥೆಗಳ ಮೂಲಕ 12 ಮಿ. ಟನ್‌ಗಳಿಂದ 29 ಮಿ. ಟನ್‌ಗಳಿಗೇರಿತು. ಏಳನೇ ಯೋಜನೆಯ (1985–90) ಅಂತ್ಯದಲ್ಲಿ 35 ಮಿ. ಟನ್ ವಾರ್ಷಿಕ ಉತ್ಪಾದನೆಯ ಗುರಿ ಇಟ್ಟುಕೊಳ್ಳಲಾಗಿದೆ. ಇದರಲ್ಲಿ ಶೇ 90 ರಷ್ಟು ಉತ್ಪಾದನೆ ಮತ್ತು ಸಂಶೋಧನೆ ONGC ಯ ಹೊಣೆಗಾರಿಕೆಯಾಗಿದೆ ಅಷ್ಟೇ ಅಲ್ಲದೆ, 1990 ರಲ್ಲಿ ಮತ್ತು ೨000 ದಲ್ಲಿ ದೇಶದ ತೈಲ ಬೇಡಿಕೆ ಅನುಕ್ರಮವಾಗಿ 63 ಮಿ. ಟನ್ ಮತ್ತು 90 ಮಿ. ಟನ್ ಎಂದೂ ನಿರೀಕ್ಷಿಸಿ ಆ ಪ್ರಮಾಣದ ತೈಲ ಉತ್ಪಾದನೆ, ಸಾಧಿಸಲು, ಸ್ವಾವಲಂಬನೆ ಪಡೆಯಲು ONGC ಯು ಬೃಹತ್ ಪ್ರಮಾಣದಲ್ಲಿ ನೆಲದ ಮೇಲೆ, ಸಮುದ್ರ–ನದಿಗಳ ತೀರಗಳಲ್ಲಿ ಹಾಗೂ ಅತಿ ದೂರದ ಆಳಗಳಲ್ಲಿ ತೈಲ ಶೋಧನೆಗಳನ್ನು ನಡೆಸಲು ಉದ್ದೇಶಿಸಿದೆ. ಸೋವಿಯತ್ ದೇಶ ಮತ್ತಿತರ ಸಮಾಜವಾದಿ ರಾಷ್ಟ್ರಗಳು ಭಾರತದ ತೈಲೋದ್ಯಮದ ಸ್ವಾವಲಂಬನೆಗೆ ನೆರವು ಮುಂದುವರೆಸಲು ಸದಾ ಸಿದ್ಧವಾಗಿವೆ.

ಆದರೆ, ಯೋಜನೆಯ ಹೊರಗೆ ತೈಲ ಶೋಧನೆಯಲ್ಲಿ ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಬೃಹತ್ ಪ್ರಮಾಣದಲ್ಲಿ ಪ್ರವೇಶಿಸಲು ಕೇಂದ್ರ ಸರಕಾರ ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಕೇಂದ್ರ ಪೆಟ್ರೋಲಿಯಂ ಮಂತ್ರಿ ಚಂದ್ರಶೇಖರ್ ಸಿಂಘರ ನೇತೃತ್ವದಲ್ಲಿ ಒಂಭತ್ತು ಸದಸ್ಯರ ನಿಯೋಗವೊಂದು ಅಮೇರಿಕ ಮತ್ತು ಪಶ್ಚಿಮ ಯುರೋಪಿನ ದೇಶಗಳನ್ನು ಸಂದರ್ಶಿಸಿ ಅಲ್ಲಿನ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅತ್ಯಂತ ಉದಾರ ರಿಯಾಯಿತಿಗಳನ್ನು ನೀಡಿ ಭಾರತದ ತೈಲ ಶೋಧನೆಯಲ್ಲಿ ಭಾಗ ವಹಿಸಲು ಆಹ್ವಾನಿಸಿದೆ. ಹೊಸ ರಿಯಾಯಿತಿಗಳನ್ನು ಪರಿಶೀಲಿಸಿದರೆ, ಭಾರತ ತನ್ನ ತೈಲ ಶೋಧನೆಯನ್ನು ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಸಂಪೂರ್ಣ ಮಾರಿಕೊಂಡಂತಿದೆ !

ಮೊದಲನೆಯದಾಗಿ, ನಿಯೋಜಿತ ತೈಲ ಶೋಧನೆಯಲ್ಲಿ ಶೇ 80 ರಷ್ಟು–ಪೂರ್ವ–ಪಶ್ಚಿಮ ಕರಾವಳಿಯ ಹಾಗೂ ಬಂಗಾಳ ಕೊಲ್ಲಿಯ ಸಮುದ್ರದ ದೂರ ಪ್ರದೇಶದಲ್ಲಿ ತೈಲ ಶೋಧನೆಯಲ್ಲಿ 27 ಯೋಜನೆಗಳನ್ನು ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಬಿಟ್ಟು ಕೊಡುವುದು.

ಎರಡನೆಯದಾಗಿ, ಈಗಿನ ಮತ್ತು ಮುಂದಿನ ತೈಲ ಶೋಧನೆಯ ಯೋಜನೆಗಳ ಸಂಪೂರ್ಣ ಭೌಗೋಳಿಕ ಹಾಗೂ ತಾಂತ್ರಿಕ ಮಾಹಿತಿಗಳನ್ನು ಬಹಳ ಅಗ್ಗದ ಬೆಲೆಗೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಕೊಡುವುದು. ಮೂರನೆಯದಾಗಿ, ಬಹು ರಾಷ್ಟ್ರೀಯ ಸಂಸ್ಥೆಗಳು ತೈಲ ಶೋಧನೆಯಲ್ಲಿ ವಹಿಸಲಿರುವ ಕನಿಷ್ಟ ವೆಚ್ಚವನ್ನಾದರೂ ಪೂರ್ವಶರತ್ತಾಗಿ ಭಾರತ ಸರಕಾರ ನಿರ್ಧರಿಸದೇ ಇರುವುದು.

ನಾಲ್ಕನೆಯದಾಗಿ, ತೈಲ ಶೋಧನೆಯ ನಂತರ, ತೈಲ ಉತ್ಪಾದನೆಯಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ಭಾರತಕ್ಕೆ ಶೇ 40 ರಷ್ಟೇ ಬಿಟ್ಟು ಕೊಟ್ಟು ಶೇ. 60 ರಷ್ಟರ ಸಿಂಹಪಾಲನ್ನು ತಮ್ಮ ಸ್ವಂತಕ್ಕೆ ಬಳಸಿ ಕೊಳ್ಳುವುದು. ಭಾರತಕ್ಕೆ ಅಗತ್ಯವಿದ್ದರೆ, ಈ ಭಾಗದ ತೈಲವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯ ದರದಲ್ಲಿ ಖರೀದಿಸುವುದು.

ಐದನೆಯದಾಗಿ, ಬಹುರಾಷ್ಟ್ರೀಯ ಸಂಸ್ಥೆಗಳು ಭಾರತದ ತೈಲ ಶೋಧನೆ ಮತ್ತು ಉತ್ಪಾದನೆಯಲ್ಲಿ ಭಾಗವಹಿಸಿ ಗಳಿಸಿದ ಲಾಭವನ್ನು ಹೇಗೆ ಬಳಸಬೇಕೆಂದು ಪೂರ್ವ ಶರತ್ತನ್ನು ವಿಧಿಸದಿರುವುದು.

ರಾಷ್ಟ್ರ ಘಾತುಕ ದುಷ್ಪರಿಣಾಮಗಳು :

ದೇಶದ ತೈಲೋದ್ಯಮವನ್ನೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾರಿಕೊಳ್ಳುವಂತಹ ಹೊಸ ರಿಯಾಯಿತಿಗಳು–

(6ನೆಯ ಪುಟ ನೋಡಿ)

ತಮಿಳು ಸಮಸ್ಯೆ ಪರಿಹಾರದ ಆಶಾವಾದ

—ಇ. ಎಂ. ಎಸ್. ನಂಬೂದಿರಿಪಾದ್

ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದು ಪ್ರತಿ ದಿನವೂ ಹಲವಾರು ಜೀವಗಳ ಕೊಲೆಗೆ ಕಾರಣವಾಗಿರುವ ಶ್ರೀಲಂಕಾದ ತಮಿಳರ ಪ್ರಶ್ನೆ ಶೀಘ್ರ ಪರಿಹಾರ ಕಾಣಬಹುದೆಂಬ ಆಶಾವಾದವನ್ನು ಸಿ ಪಿ ಐ. (ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾದ್‌ಅವರು ವ್ಯಕ್ತ ಮಾಡಿದ್ದಾರೆ. ಕೆಲವು ನಿರ್ಧಿಷ್ಟ ಸೂಚನೆಗಳೊಂದಿಗೆ ತಮಿಳು ಮುಖಂಡರು ಶ್ರೀಲಂಕೆಯ ಜಯವರ್ಧನೆಯವರೊಡನೆ ಚರ್ಚೆ ನಡೆಸಲಿರುವುದು ಸಮಾಧಾನದ ಸಂಗತಿ ಎಂದು ಮದ್ರಾಸಿನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಸಂತೋಷ ವ್ಯಕ್ತ ಪಡಿಸಿದ್ದಾರೆ. ಶ್ರೀಲಂಕೆಯ ಸಮಸ್ಯೆಯ ಕುರಿತು ರಾಜೀವ ಗಾಂಧಿಯವರು ಸರಿಯಾದ ಧೋರಣೆ ಅನುಸರಿಸಿದ್ದಾರೆಂದೂ ಹೇಳಿದ್ದಾರೆ.

ಆದರೆ ಪಂಜಾಬ್ ಸಮಸ್ಯೆಗೆ ಪರಿಹಾರ ಒದಗಿಸುವುದರಲ್ಲಿರಾಜೀವಗಾಂಧಿಯವರು ವಿಫಲರಾಗಿದ್ದಾರೆಂದೂ, ಒಪ್ಪಂದವನ್ನು ವಿರೋಧಿಸಿದ ಹರ್ಯಾಣದ ಮಾಜಿ ಮುಖ್ಯ ಮಂತ್ರಿ ಭಜನಲಾಲ್ ರನ್ನು ಶಿಸ್ತಿಗೊಳಪಡಿಸುವುದರಲ್ಲಿ ಅಯಶಸ್ವಿಯಾಗಿದ್ದಾರೆಂದೂ, ಆದರಿಂದಾಗಿ ಹೊಸ ಸಮಸ್ಯೆಗಳು ಹುಟ್ಟಿಕೊಂಡಿವೆಂದೂ ಆರೋಪಿಸಿದ್ದಾರೆ. ಚಂಡೀಗಡನ್ನು ಪಂಜಾಬಿಗೆ ಒಪ್ಪಿಸುವ ಕುರಿತು ನಿಮ್ಮ ನಿರ್ಧಿಷ್ಟ ನಿಲುವುಗಳೇನಾದರಿದ್ದರೆ ಸೂಚಿಸುತ್ತೀರಾ ಎಂಬ ಪ್ರಶ್ನೆಗೆ "ಇಡೀ ಸಮಸ್ಯೆಯ ಕುರಿತು ಪ್ರಧಾನ ಮಂತ್ರಿಯವರು ಎಡವುತ್ತಿರುವುದನ್ನು ನೋಡುವಾಗ, ಅವರು ನನ್ನ ಬುದ್ಧಿವಾದದ ಮಾತುಗಳನ್ನು ಒಪ್ಪುತ್ತಾರೆಂದು ನನಗೆ ನಂಬಿಕೆಯಿಲ್ಲ. ಅವರು ಅದನ್ನು ಒಪ್ಪಲಿಕ್ಕೆ ತಯಾರಿದ್ದರೆ ನನ್ನ ಸಲಹೆಗಳನ್ನು ಅವರಿಗೆ ನೇರವಾಗಿಯೇ ತಿಳಿಸುತ್ತೇನೆ, ಪತ್ರಿಕೆಗಳ ಮೂಲಕವಲ್ಲ" ಎಂದು ಹೇಳಿದರು.

"ಪ್ರಕಾಶಸಿಂಗ್ ಬಾದಲ್ ಅವರನ್ನೊಳಗೊಂಡು ಭಿನ್ನಕಾರಿ ಶಕ್ತಿಗಳಿಗೆ ಬೆಂಬಲ ಕೊಡುತ್ತಿರುವವರನ್ನು, ಭಿದ್ರಕಾರಿ ಶಕ್ತಿಗಳನ್ನೂ ಪ್ರತ್ಯೇಕಿಸುವ ಸಲುವಾಗಿ ರಾಜಕೀಯ ಪ್ರಕ್ಷೋಭೆ ನಡೆಯಬೇಕಾಗಿರುವುದು ತುರ್ತಿನ ಮತ್ತು ಪ್ರಮುಖ ಕರ್ತವ್ಯವಾಗಿದೆ. ಬಾದಲ್ ಅವರು ಪ್ರಾರಂಭಿಸಿರುವ ಹೊಸ ಪಕ್ಷ ಭಿನ್ನಕಾರಿಗಳ ಮತ್ತೊಂದು ಶಾಖೆಯಾಗಿದೆ. ಪಂಜಾಬ್ ಸಮಸ್ಯೆಯನ್ನು ನಿಜವಾಗಿಯೂ ಪರಿಹರಿಸಬೇಕೆಂದು ಇಚ್ಛಿಸುವ ಎಲ್ಲಾ ರಾಷ್ಟ್ರೀಯ ಪಕ್ಷಗಳ ಮುಖಂಡರ ನೇತೃತ್ವದಲ್ಲಿ ಜಂಟಿಯಾಯೇ ಚಳುವಳಿ ನಡೆಯಬೇಕು. ಈಗಾಗಲೇ ಹಲವಾರು ಕಾರ್ಮಿಕ ಸಂಘಗಳ ಮುಖಂಡರು ಹಿಂಸಾಚಾರವನ್ನು ನಿಲ್ಲಿಸಿ, ಶಾಂತಿ ಮತ್ತು ಜಾತೀಯ ಸೌಹಾರ್ದತೆಯನ್ನು ಕಾಪಾಡಬೇಕೆಂದು ಪಂಜಾಬಿನ ಜನತೆಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಿದ್ದಾರೆ. ಆದರಿಂದಾಗಿ ಸ್ವಲ್ಪ ಯಶಸ್ಸು ಪಡೆಯಲು ಸಾಧ್ಯವಾಗಿದೆ. ಈಗ ಎಲ್ಲ ರಾಜಕೀಯ ಪಕ್ಷಗಳೂ ಆ ಕೆಲಸವನ್ನು ಮಾಡಬೇಕೆಂದು ಕೇಳಿಕೊಂಡರು.

ಕೇರಳದ ಶಾಸಕ ಎಂ. ವಿ. ರಾಘವ‌ರ್ ಅವರನ್ನು ಪಾರ್ಟಿಯಿಂದ ಹೊರಗೆ ಹಾಕಿದ್ದರಿಂದಾಗಿ ಪಕ್ಷ ಬಿಕ್ಕಟ್ಟನ್ನೆದುರಿಸುತ್ತಿದೆಂದು ತಿಳಿಯುವುದು ತಪ್ಪು. ವರ್ತಮಾನ ಪತ್ರಿಕೆಗಳು ಮಾತ್ರ ಆ ಪ್ರಶ್ನೆಯನ್ನು ದೊಡ್ಡದಾಗಿ ಮಾಡಿವೆ ಎಂದರು.

ಪಶ್ಚಿಮ ಬಂಗಾಲದ ಎಡರಂಗ ಸರಕಾರ ಸಿ.ಪಿ.ಐ. (ಎಂ) ಪಕ್ಷದ ಮೂಲಭೂತ ಧೋರಣೆಗಳಿಗೆ ವಿರೋಧವಾಗಿ ಖಾಸಗಿಬಂಡವಾಳದಾರರರಿಗೆಪ್ರೋತ್ಸಾಹ ನೀಡುತ್ತಿದೆಂದು ಹೇಳುವುದು ಸರಿಯಲ್ಲ ಎಂದು ಪ. ಬಂಗಾಲವೇ ಆಗಲೀ ಅಥವ ಮತ್ತಾವ ರಾಜ್ಯವೇ ಆಗಲಿ ಔದ್ಯಮಿಕ ಬೆಳವಣಿಗೆ ಯಾಗಬೇಕೆಂದು ಅಪೇಕ್ಷೆ ಪಡುವುದು ಸಹಜವೆಂದೂ ಆದರೆ ಇಂದಿನ ದೇಶದ ರಾಜಕೀಯ ಪದ್ಧತಿಯಲ್ಲಿ "ಪ್ರತಿಯೊಂದೂ ಕೇಂದ್ರದ ಕೈಯಲ್ಲಿದೆಂದೂ", ಕೇಂದ್ರ ನಿರ್ಧರಿಸಿದ ಕಾರ್ಯಕ್ರಮ ಮತ್ತು ಧೋರಣೆಗಳಿಗನುಸರಿಸಿಯೇ ರಾಜ್ಯಗಳು ಕಾರ್ಯ ಮಾಡಬೇಕಾಗುತ್ತದೆಂದು ವಿವರಿಸಿದರು ಅವರಿಗೇ ಬಿಟ್ಟಿದ್ದಾದರೆ ಜ್ಯೋತಿಬಸು ಸರಕಾರ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ತಯಾರಿದ್ದಾರೆಂದೂ, ಆದರೆ ಕೇಂದ್ರ ಸರಕಾರ ಖಾಸಗೀ ಬಂಡವಾಳ ದಾರರಿಗೆ ಪ್ರೋತ್ಸಾಹ ನೀಡುತ್ತಿದೆಂದೂ ಆರೋಪಿಸಿದರು. ಕಳೆದ ಹಲವಾರು ದಶಕಗಳಿಂದಲೂ ಪ. ಬಂಗಾಲದಲ್ಲಿ ಗುತ್ತೇದಾರಿಗಳಿದ್ದಾರೆಂದೂ, ಇತ್ತೀಚೆಗೆ ಕಲ್ಕತ್ತದ ಕೆಲವು ಗುತ್ತೇದಾರಿ ಕಾರ್ಖಾನೆದಾರರು ತಮ್ಮ ಕೈಗಾರಿಕೆಗಳನ್ನು ವಿಸ್ತರಿಸುತ್ತೇವೆಂದು ಕೇಳಿಕೊಂಡಾಗ, ಆರ್ಥಿಕ ಬೆಳವಣಿಗೆಯ ಉದ್ದೇಶದಿಂದ ಎಡರಂಗ ಸರಕಾರ ಅದನ್ನು ತಿರಸ್ಕರಿಸಿಲ್ಲವೆಂದೂ ಹೇಳಿದರು. "ಇದರಲ್ಲಿ ವೈರುದ್ಯ ಏನಿದೆಂದು" ಸವಾಲು ಹಾಕಿದರು. "1978ರಲ್ಲಿ ಕೈಗಾರಿಕೆಗಳು ಪಶ್ಚಿಮ ಬಂಗಾಲದಿಂದ ಹೊರಗೆ ಹೋಗಿದ್ದವು. ಆದರೆ ಕಳೆದೆಂಟು ವರ್ಷಗಳಿಂದ ಅವರು ಹೊಸ ಬಂಡವಾಳ ಹೂಡುತ್ತಿದ್ದಾರೆ. ನಮ್ಮ ಸರಕಾರ ಅದನ್ನು ವಿರೋಧಿಸಿಲ್ಲ. ಸಿ.ಪಿ.ಐ (ಎಂ.) ಕುರಿತು ತಮಗಿರುವ "ತಪ್ಪು ತಿಳುವಳಿಕೆ" ಯನ್ನು ತಿದ್ದಿಕೊಳ್ಳಲು ಕೈಗಾರಿಕೋದ್ಯಮಿಗಳಿಗೆ ಕಾಲಾವಕಾಶ ಬೇಕಾಯಿತಷ್ಟೇ" ಎಂದು ಸ್ಪಷ್ಟಪಡಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಜೊತೆಯಲ್ಲಿ ಹೊಂದಾಣಿಕೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಎರಡೂ ಪಕ್ಷಗಳೂ ಒಪ್ಪಿರುವ ವಿಷಯಗಳಲ್ಲಿ ಜಂಟಿಯಾಗಿ ಕೆಲಸ ಮಾಡುತ್ತೇವೆಂದೂ, ಇನ್ನೂ ಹಲವಾರು ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಕೂಡ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ ಅದು ಅಡ್ಡಿಬರಲಾರದೆಂದೂ ಸ್ಪಷ್ಟಪಡಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿ

ಕೇಂದ್ರ ಸಮಿತಿಯು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅತ್ಯುನ್ನತ ಸಮಿತಿ. ಎರಡು ಅಧಿವೇಶನಗಳನಡುವೆಪಕ್ಷದ ಎಲ್ಲಾಕಾರ್ಯಕಲಾಪಗಳನ್ನು ಪಕ್ಷದ ಅಧಿವೇಶನದ ನಿರ್ದೇಶನಗಳ ಪ್ರಕಾರ ನಡೆಸಿಕೊಂಡುಹೋಗುವ ಜವಾಬ್ದಾರಿಯುಳ್ಳ ಉನ್ನತ ಸಮಿತಿ' ಎರಡು ಕೇಂದ್ರ ಸಮಿತಿ ಸಭೆಗಳ ನಡುವೆ ಪಕ್ಷದ ಪರವಾಗಿ, ಕೇಂದ್ರ ಸಮಿತಿಯ ತಿಸ್ತಿಗೆ ಒಳಗಾಗಿ ಪೊಲಿಟ್ ಬ್ಯೂರೋ ಕೆಲಸ ಮಾಡುತ್ತದೆ.

ಈ ಸಮಿತಿಗಳು ಹೇಗೆ ಕ್ರಾಂತಿಕಾರಿಯಾಗಿ ಕೆಲಸವಮಾಡುತ್ತವೆ ಎಂಬದುನ್ನು ಇತ್ತೀಚೆಗೆ ಜುಲೈ 4 ರಿಂದ 6 ರವರೆಗೆ ನಡೆದ ಕೇಂದ್ರಸಮಿತಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ ಕೇಂದ್ರ ಸಮಿತಿಯ ಒಬ್ಬ ಸದಸ್ಯನಾಗಿ ನಾನು ನಿರ್ದಿಷ್ಟವಾಗಿ ವಿವರಿಸಲಪೇಕ್ಷಿಸುತ್ತೇನೆ.

ಕ್ರಮವತ್ತಾಗಿ

ಮೂರು ತಿಂಗಳಿಗೊಮ್ಮೆ ಕೇಂದ್ರ ಸಮಿತಿಯು ಸೇರಿಯೇ ಸೇರುತ್ತದೆ. ವಿಶೇಷ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಸೇರುವ ಸಂಪ್ರಾಠವೂ ಇದೆ. ಹೀಗೆ ಕ್ರಮವತ್ತಾಗಿ ಸೇರುವುದರಿಂದ ದೇಶ ವಿದೇಶಗಳಲ್ಲಿ ತೀವ್ರಗತಿಯಲ್ಲಿ ಉಂಟಾಗುತ್ತಿರುವಬೆಳವಣಿಗೆಗಳನ್ನೂಸ್ಥಿತ್ಯಂತರಗಳನ್ನೂ, ಘಟನೆಗಳನ್ನು, ಸತತವಾಗಿ ಗುರುತಿಸಿ ಅವುಗಳಕುರಿತು ನಮ್ಮಪಕ್ಷದ ಅಂದಾಜುಗಳನ್ನೂ, ನಿಲುವೆಗಳನ್ನೂ ಕೈಗೊಳ್ಳಲು ಸಾಧ್ಯವಾಗುವುದು. ಜಾಗತಿಕ ಕ್ರಾಂತಿಕಾರಿ ಪ್ರತಿಕ್ರಿಯೆಯ ಭಾಗವಾಗಿಯೇ ನಮ್ಮ ದೇಶದಕ್ರಾಂತಿಕಾರಿ ಪ್ರತಿಕ್ರಿಯೆಯೂ ಪ್ರಹಿಸುತ್ತಿರುವುದರಿಂದ ಈ ರೀತಿ ಕ್ರಮವತ್ತಾಗಿ ಸೇರಿ ಸತತವಾಗಿ ಅಂದಾಜು ಮಾಡುವುದು ಅತಿ ಮಹತ್ವದ ಹೆಜ್ಜೆಯಾಗಿರುತ್ತದೆ.

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದಲ್ಲಿ ಎರಡು ಕೇಂದ್ರ ಸಮಿತಿ ಸಭೆಗಳ ನಡುವೆ ಇದೇ ರೀತಿ ರಾಜಕೀಯ ಬದಲಾವಣೆಗಳ ವೀಕ್ಷಣೆ ಮಾಡಿ ನಮ್ಮ ಪಕ್ಷದ ನಿಲುವೆಗಳನ್ನು ನಿರ್ಧರಿಸುವ ಅಧಿಕಾರ ಪೋಲಿಟ್ ಬ್ಯೂರೋವಿಗೆ ಇರುತ್ತದೆ. ಪರಿಷ್ಕರಣವಾದಿಗಳ ಪಕ್ಷದಲ್ಲಿ ಈ ವ್ಯವಸ್ಥೆ ಇರುವುದಿಲ್ಲ.

ರಾಜಕೀಯ ವೀಕ್ಷಣೆ

ಜುಲೈ 4 ರಿಂದ 6ರ ವರೆಗೆ ನಡೆದ ಕೇಂದ್ರ ಸಮಿತಿಯ ಸಭೆಯ ಕಾರ್ಯಕಲಾಪಗಳನ್ನು ಸಮೀಪದಿಂದ ಪರೀಕ್ಷಿಸೋಣ.

ಪೊಲಿಟ್ ಬ್ಯೂರೋ ಪರವಾಗಿ ಸೂವತ್ತೆರಡು ಪುಟದ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳಣಿವಗೆಗಳನ್ನು ವಿವರಿಸಿ ನಮ್ಮ ನಿಲುವುಗಳನ್ನು ನಿರೂಪಿಸುವ ಒಂದು ಕರಡು ದಸ್ತಾವೇಜನ್ನು ಕಾಂ. ಬಿ. ಟಿ. ರಣದಿವೆಯವರು ಕೇಂದ್ರ ಸಮಿತಿಯ ಸಭೆಯ ಮುಂದೆ ಇಟ್ಟು ವಿವರಿಸಿದರು.

ಈ ದಸ್ತಾವೇಜಿನಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ನೋಡೋಣ : ಸೋವಿಯತ್ ಕಮ್ಯುನಿಸ್ಟ್ ಪಕ್ಷದ 27ನೇ ಪಾರ್ಟಿ ಅಧಿವೇಶನದ ಮಹತ್ವ, ಶಾಂತಿಯ ಹೋರಾಟ, ಯು. ಎಸ್. ಎಸ್. ಆರ್. ನ ವಿವಿಧ ಶಾಂತಿ ಸೂಚನೆಗಳು ಮತ್ತು ಯು. ಎಸ್. ಎ. ಯ ತಿರಸ್ಕಾರ; ಲಿಬಿಯಾ ಮತ್ತು ನಿಕಾರಾಗುವಾಗಳಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಆಕ್ರಮಣ ಮತ್ತು ಪಿತೂರಿ ; ಭಾರತ ಪರ್ಯಾಯ ಭೂಖಂಡದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಪಿತೂರಿ ; ಶಾಂತಿ ಚಳುವಳಿ ಮತ್ತು ತಟಸ್ಥ ನೀತಿಯ ಕುರಿತು ಜನತಾ ಆಂದೋಳನಗಳ ಅವಶ್ಯಕತೆ ; ಅಮೇರಿಕಾ ಸಾಮ್ರಾಜ್ಯ ಶಾಹಿಗಳೊಡನೆ ರಕ್ಷಣಾ ಸಂಶೋಧನೆ ನಡೆಸುವ ಹಂಚಿಕೆ ಮತ್ತು ಅದರಿಂದುಂಟಾಗಬಹುದಾದ ಅಪಾಯ; ರಾಜೀವ್ ಗಾಂಧಿಯ ಅರ್ಥಿಕನೀತಿಯ ಫಲಗಳು ಸಾರ್ವಜನಿಕ ಕ್ಷೇತ್ರದ ನಿರ್ಮೂಲೀಕರಣ : ಭಾರತೀಯ ಬಂಡವಾಳವನ್ನು ಕಡೆಗಾಣಿಸುತ್ತಿರುವುದು ; ಬಹುರಾಷ್ಟ್ರೀಯ ಕಂಪನಿಗಳ ಮತ್ತು ವಿದೇಶದಲ್ಲಿರುವ ಭಾರತೀಯ ಬಂಡವಾಳದ ಮೂಲಕ ದೇಶದೊಳಗೆ ತೀವ್ರ ಮಧ್ಯಪ್ರವೇಶ : ವಿದೇಶ ಧೋರಣೆಯ ಮೇಲೆ ಸಾಮ್ರಾಜ್ಯಶಾಹಿಗಳ ಒತ್ತಡ ; ಸಣಬು ಮತ್ತು ಹತ್ತಿಗಿರಿಣಿ ಕೈಗಾರಿಕೆಗಳ[ವಿಶೇಷವಾಗಿ ಪವರ್ ಲೂಮ್] ತೀವ್ರ ಬಿಕ್ಕಟ್ಟು ಮತ್ತು ನಿರುದ್ಯೋಗ, ಶ್ರೀಮಂತರಿಗೆ ಅನುಕೂಲ ಮಾಡುವ ಹೊಸ ವಿದ್ಯಾಭ್ಯಾಸ ನೀತಿ ; ಛಿದ್ರಕಾರಿ ಶಕ್ತಿಗಳ ಕಾರ್ಯಾಚರಣೆಗಳಲ್ಲಿ ಹೆಚ್ಚಳ, ಪಂಜಾಬ್ ಒಪ್ಪಂದ ಮತ್ತು ಕೇಂದ್ರ ಹಾಗೂ ಬರ್ನಾಲ್ ಸರಕಾರಗಳ ನಿಲುವೆಗಳು, ಮುಸ್ಲಿಂ ಸ್ತ್ರೀಯರ ವಿಚ್ಛೇದನಾ ರಕ್ಷಣಾ ಕಾನೂನು; ರಾಮ ಜನ್ಮಭೂಮಿ, ಕೇರಳದ ಕರುಣಾಕರನ್ ಮಂತ್ರಿಮಂಡಳದ ಕಸರತ್ತು, ಅಸ್ಸಾಂ ಒಪ್ಪಂದ ಮತ್ತು ಅಸ್ಸಾಂ ಭಾಷಾ ಮತ್ತು ಮತೀಯಅಲ್ಪಸಂಖ್ಯಾತರ ಮತ್ತು "ವಿದೇಶಿ ನಾಗರೀಕರ" ಭವಣೆ, ಬ್ರಿಟೀಷ್ ಸರಕಾರದ ಆಶ್ರಯದಲ್ಲಿದ್ದ ಲಾಲ್ ಡೆಂಗಾನೊಡನೆ ಭಾರತ ಸರ್ಕಾರದ ಒಪ್ಪಂದ, ಕಾಂಗ್ರೆಸ್ (ಐ) ಪಕ್ಷದೊಳಗಣ ಅಂತರಿಕ ವಿದ್ಯಾಮಾನಗಳು, ಪಶ್ಚಿಮ ಬಂಗಾಳದ್ಲ ಎಡರಂಗದ ವಿಜಯ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜವಾಬ್ದಾರಿ, ಸರ್ವಾಧಿಕಾರಿ ಬೆಳವಣಿಗೆ ಮತ್ತು ವಿಶಾಲ ಪ್ರಜಾಸತ್ತಾತ್ಮಕ ಶಕ್ತಿಗಳ ವೇದಿಕೆಯ ಅವಶ್ಯಕತೆ, ಛಿದ್ರಕಾರಿ ಶಕ್ತಿಗಳವಿರುದ್ಧ ಹೋರಾಟದ ಮಹತ್ವ.

ಇನ್ನೂ ಹಲವಾರು ವಿಷಯಗಳು.

ಇವುಗಳ ಕುರಿತು ಸೂಕ್ಷ್ಮವಾದವಿಶ್ಲೇಷಣೆ, ಸಿ. ಸಿ. ಸದಸ್ಯರಿಂದ ಚರ್ಚೆ ಮತ್ತು ತಿದ್ದುಪಡಿಗಳ ಸಹಿತ ದಸ್ತಾವೇಜಿನ ಅಂಗೀಕಾರ.

ಪಿ. ರಾಮಚಂದ್ರ ರಾವ್

ಉದಾಹರಣೆಗಾಗಿ, ಶಾಂತಿ ಚಳುವಳಿಯನ್ನು ನಮ್ಮ ದೇಶದಲ್ಲಿ ಜನತಾ ಚಳುವಳಿಯಾಗಿ ಬೆಳೆಸುವ ಕುರಿತು ಸುಧೀರ್ಘವಾಗಿ ಚರ್ಚೆ ನಡೆಯಿತು, ತೀರ್ಮಾನ ಕೈಗೊಳ್ಳಲಾಯಿತು.

ರಾಜೀವ್ ಗಾಂಧಿಯ ಹೊಸ ಆರ್ಥಿಕ ನೀತಿಯು ಹೇಗೆ ದೇಶದ ಆರ್ಥಿಕವನ್ನು ಹದಗೆಡಿಸುತ್ತಿದೆ ಎಂಬುದರ ಭಾಗವಾಗಿ ಹೇಗೆ ಭಾರತೀಯ ಬಂಡವಾಳ (ಒಂದಂಶ ಗುತ್ತೇದಾರಿ ಬಂಡವಾಳಶಾಹಿಗಳನ್ನೂ ಕೂಡ)ವನ್ನು ಹಾಳುಗೆಡುಹುತ್ತಿದೆ ಎಂಬುದರ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಹೊಸ ವಿದ್ಯಾಭ್ಯಾಸ ಧೋರಣೆ ಇದೀಗ ರಾಜ್ಯಗಳಲ್ಲಿ ಜಾರಿ ಬಂದಿರುವ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ಪ್ರಾಯೋಗಿಕ ನಿಲುವೆಯ ಕುರಿತು ಚರ್ಚೆ ನಡೆದು ಧೋರಣೆ ತೀರ್ಮಾನಿಸಲ್ಪಟ್ಟಿತು.

ಪಾಲಿಟ್ ಬ್ಯೂರೋಕೆಲಸದ ವರದಿ

ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಕೇಂದ್ರ ಸಮಿತಿಯ ನಂತರದ 3½ ತಿಂಗಳುಗಳಲ್ಲಿ ಪೊಲಿಟ್ ಬ್ಯೂರೋ ನಡೆಸಿದ ಕೆಲಸದ ವರದಿಯನ್ನು ಸಭೆಯ ಮುಂದೆ ಕಾಂ. ಇ. ಎಂ. ಎಸ್. ನಂಬೂದರಿಪಾದರು ಇರಿಸಿದರು.

ಅದರಲ್ಲಿರುವ ಕೆಲವು ಪ್ರಮುಖ ಅಂಶಗಳ ಕುರಿತು ಪ್ರತ್ಯೇಕವಾಗಿ ವಿವರಣೆಗಳನ್ನು ಕೊಟ್ಟರು.

ಈ ವರದಿಯಲ್ಲಿರುವ ಅಂಶಗಳನ್ನು ನೋಡಿರಿ :

ರಾಜಕೀಯ ಸಂಘಟನಾ ವರದಿಯನ್ನು ಪೂರ್ತಿಗೊಳಿಸಿ ಅದರಿಂದ ಉದ್ಭವಿಸುವ ಕರ್ತವ್ಯಗಳ ಜಾರಿಯ ಕುರಿತು, ಪಕ್ಷದ ಪತ್ರಿಕೆಗಳ ಸಂಪಾದಕರ ಸಭೆಯ ತೀರ್ಮಾನಗಳ ಜಾರಿಯ ಕುರಿತು, ರಾಷ್ಟ್ರೀಯ ಸಮಗ್ರತಾ ಕಾನ್ಸಿಲ್ ಸಭೆ ಮತ್ತು ಪಂಜಾಬ್– ನಮ್ಮ ಭಾಗವಹಿಸುವಿಕೆ, ವಿರೋಧ ಪಕ್ಷಗಳ ಸಭೆ ಮತ್ತು ಜಾರ್ಜ್‌ಫರ್ನಾಂಡಿಸ್, ಕೇರಳದಲ್ಲಿ ಕರುಣಾಕರನ್ ಮಂತ್ರಿಮಂಡಳದ ಕಸರತ್ತು ಮತ್ತು ರಾಘವನ್‌ರವರ ಉಚ್ಚಾಟನೆಯ ಕುರಿತು, ಅಖಿಲ ಭಾರತ ಕಿಸಾನ್ ಸಭೆಯ ಸುವರ್ಣ ಮಹೋತ್ಸವ ಅಧಿವೇಶನ, ಕೃಷಿ ಕೂಲಿಗಾರರ ಸಂಘಟನೆ, ಪ್ರಜಾಸತ್ತಾತ್ಮಕ ಮಹಿಳಾ ಅಧಿವೇಶನ, ಟ್ರೇಡ್ ಯೂನಿಯನ್‌ಗಳ ಸಂಯುಕ್ತ ಚಳುವಳಿ, ಜೂನ್ 22ರ ಆಚರಣೆ, ಪಕ್ಷದ ಶಾಲೆಗಳು, ಸಿ. ಪಿ. ಐ. (ಎಂ)–ಸಿ. ಪಿ. ಐ. ಗಳ ನಡುವಿನ ಮಾತುಕತೆ, ಮೇ ಶತಮಾನೋತ್ಸವ ನಡವಳಿಕೆಗಳು, ಡಾಕ್ಟರುಗಳ ಸಭೆ, ರಾಜ್ಯ ಸಮಿತಿಗಳಿಗೆ ಪಿ. ಬಿ ಸದಸ್ಯರ ಸಹಾಯ, ಅಂತರರಾಷ್ಟ್ರೀಯ ಸಂಬಂಧಗಳು, ಪಕ್ಷದ ಕೇಂದ್ರದ ಸಂಘಟನೆ ಬಲಪಡಿಸಿದುದು, ಇತ್ಯಾದಿ.

ಇನ್ನೂ ಹಲವಾರು ವಿಷಯಗಳು.

ಇವುಗಳ ಕುರಿತು ವಿವಿಧ ರಾಜ್ಯಗಳ ಸಿ. ಸಿ. ಸದಸ್ಯರ ಟೀಕೆ, ಟಿಪ್ಪಣಿ ನಂತರ ತಿದ್ದುಪಡಿ ಸಮೇತ ಅಂಗೀಕಾರ.

ವಿಶೇಷವಾಗಿ, ಅಖಿಲ ಭಾರತ ಕಿಸಾನ್ ಸಭಾ ಸುವರ್ಣ ಮಹೋತ್ಸವ ಅಧಿವೇಶನದ ಕಾರ್ಯಕಲಾಪಗಳ ಕುರಿತು ಚರ್ಚೆ, ವಿಮರ್ಶೆ ನಡೆಯಿತು.

ಪಕ್ಷವು ರೈತರ ಮಧ್ಯೆ ಕ್ರಾಂತಿಕಾರಿ ಕೆಲಸ ಮಾಡುವುದರಕುರಿತು ಸುದೀರ್ಘ ಚರ್ಚೆ ನಡೆಯಿತು. ಸಮರ್ಪಕವಾಗಿ ಈ ಕರ್ತವ್ಯವನ್ನು ಪೂರೈಸಲು ಯಾವ ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಕುರಿತು ತೀರ್ಮಾನವಾಯಿತು.

12ನೇ ಅಧಿವೇಶನ ಅಂಗೀಕರಿಸಿದ ರಾಜಕೀಯ ಲೈನನ್ನು ರಾಘವನ್ ಹೇಗೆ ಉಲ್ಲಂಘಿಸಿ ನಡೆದರು ಎಂಬುದರ ಕುರಿತು ವಿವರಣೆ, ಚರ್ಚೆ ಮತ್ತು ಅವರನ್ನು ಪಕ್ಷದಿಂದ ಉಚ್ಛಾಟಿಸಿದ ಕೇರಳ ರಾಜ್ಯ ಸಮಿತಿಯ ತೀರ್ಮಾನವನ್ನು ಪುಷ್ಟೀಕರಿಸಿ ನಿರ್ಧಾರ ಕೈಗೊಳ್ಳಲಾಯಿತು.

ಇತರ ನಿರ್ಣಯಗಳು

ಹಲವಾರು ರಾಜ್ಯ ಸಮಿತಿಗಳ ವರದಿಗಳನ್ನು ಕೇಂದ್ರ ಸಮಿತಿ ಸದಸ್ಯರಿಗೆ ಒದಗಿಸಲಾಯಿತು.

ಜಿ. ಡಿ. ಆರ್. ಜೆಕೋಸ್ಲಾವೇಕಿಯಾ, ಮಂಗೋಲಿಯಾ, ಯುಗೋಸ್ಲಾವಿಯ, ಇಟೇಲಿ ಕಮ್ಯುನಿಸ್ಟ್ ಪಕ್ಷಗಳ ಅಧಿವೇಶನಗಳಲ್ಲಿ ಭಾಗವಹಿಸಿದುದು, ಜಿ.ಡಿ.ಆರ್. ಮತ್ತುಮಂಗೋಲಿಯಾ ಅಧಿವೇಶನಗಳಲ್ಲಿ ಭಾಗವಹಿಸಿದವರ ಪ್ರತ್ಯಕ್ಷ ವರದಿ.

ಕಾಂ. ಸುನೀಲ್ ಮೈತ್ರಾ ಇವರ ನೇತೃತ್ವದಲ್ಲಿ ಚೀನಾ ಸಂದರ್ಶನ ಮಾಡಿದ ವರದಿ.

1951ರಲ್ಲಿ ಭಾರತ ಕ್ರಾಂತಿಕಾರಿ ಕಣ್ಣೋಟ ಕುರಿತು ಅಂಗೀಕಾರವಾದ "ಧೋರಣೆಯ ಕುರಿತು ಹೇಳಿಕೆ" ಹೇಗೆ 1976ರಲ್ಲಿಕೊನೆಯದಾಗಿ ಕೇಂದ್ರಸಮಿತಿಯಲ್ಲಿ ಪುನರ್ ವಿಮರ್ಶಿಸಲಾಯಿತು, 1978 ರಲ್ಲಿ ದೃಢೀಕರಿಸಲ್ಪಟ್ಟಿತು, 1985 ರಲ್ಲಿ ಪ್ರಕಟವಾಯಿತು ಎಂಬುದರ ಕುರಿತು ಕಾಂ. ಇ. ಎಂ. ಎಸ್. ರಿಂದ ವಿವರಣೆ.

ಹೀಗೆ ಮೂರು ದಿನಗಳ ಸತತವಾದ ಕಾರ್ಯಕ್ರಮವನ್ನು ಕೇಂದ್ರ ಸಮಿತಿ ಪೊಲಿಟ್ ಬ್ಯೂರೋವಿನ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಿತು. ದೇಶದ ಕ್ರಾಂತಿಕಾರಿ ಚಳುವಳಿಯನ್ನು ದೃಢವಾಗಿ ಮುನ್ನಡೆಸುವುದಕ್ಕೆ ಈ ಸಭೆಗಳು ಅತ್ಯಾವಶ್ಯಕವಾಗಿವೆ ಎಂಬುದರಲ್ಲಿ ಎರಡು ಮಾತಿದೆಯೆ ? ಕೇಂದ್ರ ಸಮಿತಿ ಸಭೆ ನಡೆಯುತ್ತಿದ್ದಾಗಲೇ ಜಗಜೀವನ್ ರಾಂ ಮೃತರಾದ ಸುದ್ದಿ ಬಂತು. ಕೂಡಲೇ ಕೇಂದ್ರ ಸಮಿತಿಯು ಶ್ರದ್ಧಾಂಜಲಿ ಠರಾವನ್ನು ಮಾಡಿತು, ಮೃತರ ಶರೀರಕ್ಕೆ ಪುಷ್ಪ ಅರ್ಪಣೆ ಮಾಡಲಾಯಿತು

ವಿಷಯಗಳಿಗೆ ಸಂಬಂಧಪಟ್ಟ, ನಿರೂಪಣೆಗಳು ಸರಿಯೋ ತಪ್ಪೋ ಅಥವಾ ಎಷ್ಟಂಶ ಸರಿ–ತಪ್ಪು ಎಂಬಿತ್ಯಾದಿ ಅಂಶಗಳನ್ನು ತಮ್ಮ ಅನುಭವದ ಆಧಾರದಲ್ಲಿ ನಿರ್ಭಯವಾಗಿ ಚರ್ಚಿಸಿ ಸಿ. ಸಿ. ಯ ಸದಸ್ಯರು ತಮ್ಮ ಕ್ರಾಂತಿಕಾರಿ ದೃಷ್ಟಿ ಕೋನವನ್ನು ವ್ಯಕ್ತಪಡಿಸುತ್ತಿದ್ದರು.

ಸಿ. ಸಿ. ಯಲ್ಲಿ ಪರಸ್ಪರ ಸಂಬಂಧ ಕ್ರಾಂತಿಕಾರಿ ಸಂಬಂಧ, ವ್ಯಕ್ತಿಗತ, ಗೌರವವು ವಿಷಯದ ಕುರಿತು ನಿಷ್ಠುರ ಚರ್ಚೆಗೆ ಅಡ್ಡಿ ಮಾಡುತ್ತಿರಲಿಲ್ಲ.

ಉದಾಹರಣೆಗಾಗಿ, ಅಖಿಲ ಭಾರತ ಕಿಸಾನ್‌ಸಭಾಸುವರ್ಣ ಮಹೋತ್ಸವದ ಅಧಿವೇಶನದ ಕುರಿತಾದ ಚರ್ಚೆಯು ಅತ್ಯಂತ ಮುಖ್ಯವೂ ವಸ್ತುನಿಷ್ಟವೂ ಆಗಿತ್ತು.

ಖಂಡಿತವಾಗಿಯೂ ಈ ರೀತಿ ಚರ್ಚಿಸುವ ಮೂಲಕ ಕೇಂದ್ರ ಸಮಿತಿಯು ಇಡೀ ಪಕ್ಷದ ಎಲ್ಲಾ ಘಟಕಗಳಿಗೂ ಮಾರ್ಗದರ್ಶನ ಮಾಡುತ್ತಿದೆ ಎಂದು ಹೇಳಬಹುದು. ○

ಕೇಂದ್ರ ಸಮಿತಿ ಹೇಳಿಕೆ :

ಆರ್ಥಿಕ ನೀತಿಗಳನ್ನು ಪ್ರತಿರೋಧಿಸಿ, ಛಿದ್ರಕಾರಿ ಶಕ್ತಿಗಳನ್ನು ಎದುರಿಸಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಜುಲೈ 4 ರಿಂದ 6 ರ ವರೆಗೆ ಸಭೆಸೇರಿ ಕಳೆದಮೂರು ತಿಂಗಳಲ್ಲಿ ದೇಶ ಹಾಗೂ ವಿದೇಶದಲ್ಲಿನ ಪ್ರಮುಖ ಬೆಳವಣಿಗೆಗಳ ಪರಾಮರ್ಶೆ ನಡೆಸಿತು.

ಜಗತ್ತಿನಾದ್ಯಂತ ಜನಸಾಮಾನ್ಯರು ಹಾಗೂ ಪ್ರಗತಿಶೀಲ ಜನ ವಿಭಾಗಗಳ ಶಾಂತಿಗೆ ಹೆಚ್ಚೆಚ್ಚು ಬೆಂಬಲ ಸೂಚಿಸುತ್ತಿರುವಾಗ ಅಮೇರಿಕಾ ಹಾಗೂ ಅದರ ಮಿತ್ರ ದೇಶಗಳ ಆಕ್ರಮಣಕಾರಿ ಆಳುವ ವಲಯಗಳು ಯುದ್ಧೋನ್ಮಾದವನ್ನು ಮುಂದುವರಿಸುತ್ತಿರುವುದನ್ನು ಹಾಗೂ ಭಾರತವೂ ಸೇರಿದಂತೆ ಎಲ್ಲಾ ಅಭಿವೃದ್ಧಿ ಶೀಲ ದೇಶಗಳ ಸ್ವಾತಂತ್ರ್ಯ ಸಮಗ್ರತೆಗೆಬೆದರಿಕೆಯೊಡ್ಡುಸುತ್ತಿರುವುದನ್ನು ಗಮನಿಸಿ ನಮ್ಮ ಉಪಖಂಡದಲ್ಲಿ ಸಾಮ್ರಾಜ್ಯಶಾಹಿಗಳ ಕುತಂತ್ರಗಳತ್ತ ಕೇಂದ್ರ ಸಮಿತಿ ತನ್ನ ಸಭೆಯ ನಂತರ ಹೊರಡಿಸಿದ ಹೇಳಿಕೆಯಲ್ಲಿ ಜನತೆಯ ಗಮನ ಸೆಳೆದಿದೆ. ಶ್ರೀಲಂಕಾದ ತಮಿಳರ ಪ್ರಶ್ನೆಯನ್ನು ಆ ದೇಶದ ಐಕ್ಯತೆಯ ಚೌಕಟ್ಟಿನೊಳಗೆ ಪರಿಹರಿಸುವ ಪ್ರಯತ್ನಗಳು ವಿಫಲಗೊಂಡರೆ ಅದರಿಂದ ಸಾಮ್ರಾಜ್ಯ ಶಾಹಿಗಳಿಗೆ ಆ ದೇಶದ ವ್ಯವಹಾರಗಳಲ್ಲಿ ನೇರವಾಗಿ ಮಧ್ಯೆ ಪ್ರವೇಶಿಸಲು ದಾರಿ ಮಾಡಿಕೊಟ್ಟಂತಾಗುತ್ತದೆ. ಮಾತ್ರವಲ್ಲ ನಮ್ಮ ದೇಶಕ್ಕೂ ಅದರಿಂದ ಬೆದರಿಕೆಯುಂಟಾಗುತ್ತದೆಂದು ಹೇಳಿಕೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ರಕ್ಷಣಾ ಸಂಶೋಧನೆಯ ಕ್ಷೇತ್ರದಲ್ಲಿ ಭಾರತಹಾಗೂ ಅಮೇರಿಕಾಗಳ ನಡುವೆ ಮಾತುಕತೆ ನಡೆಯುತ್ತಿರುವುದು ಅನಿಷ್ಟಕರ ಎಂದು ಕೇಂದ್ರ ಸಮಿತಿ ಪರಿಗಣಿಸಿದೆ. ಹಿಂದೆ ಕೇಂದ್ರಸರಕಾರಗಳು, ಅಮೇರಿಕಾ ಜೊತೆ ನಮ್ಮ ದೇಶದ ರಕ್ಷಣೆಗೆ ಸಂಬಂಧಿಸಿ ಈ ರೀತಿಯ ಸಂಬಂಧವನ್ನು ವಿರೋಧಿಸಿದ್ದವು. ಈಗಿನ ಕೇಂದ್ರ ಸರಕಾರ ಅದನ್ನು ಬದಲಾಯಿಸಬಯಸುತ್ತಿದೆ. ಇದರಿಂದ ಅಪಾಯ ಗ್ಯಾರಂಟಿ. ಇದರ ವಿರುದ್ಧ ಜನಜಾಗೃತಿಗೊಳಿಸಬೇಕೆಂದು ಕರೆ ನೀಡಿದೆ.

ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ವೇಷದ ವಿರುದ್ಧ ಹೋರಾಟದಲ್ಲಿ ಭಾರತ ಹಾಗೂ ಇತರ ಅಲಿಪ್ತ ದೇಶಗಳ ನಿಲುವನ್ನು ಸ್ವಾಗತಿಸಿದ ಬ್ರಿಟನ್ನಿನ ವರ್ಣದ್ವೇಷ ಪರವಾದ ಸರಕಾರದ ವಿರುದ್ಧ ಇತರ ಕಾಮನ್ವೆಲ್ತ್ ದೇಶಗಳೊಂದಿಗೆ ಭಾರತವೂ ದೃಢ ನಿಲುವು ತಳೆಯಬೇಕಾದ ಸಮಯ ಬಂದೊದಗಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಹೊಸ ಆರ್ಥಿಕ, ಶಿಕ್ಷಣ ನೀತಿಗಳ ವಿರುದ್ಧ

ಭಾರತೀಯ ಜನತೆಯಷ್ಟೇ ಅಲ್ಲ, ಬಂಡವಾಳಶಾಹಿಗಳ ಕೆಲವು ವಿಭಾಗಗಳ ಹಿತಾಸಕ್ತಿಗಳಿಗೆ ಕೂಡಾ ವಿರುದ್ಧವಾದ ರಾಜೀವಗಾಂಧಿಸರಕಾರದ ಹೊಸ ಆರ್ಥಿಕ ನೀತಿಯ ಪ್ರಕಾರ ಹಡಗು ನಿರ್ಮಾಣ. ವಿದ್ಯುತ್ ಉಪಕರಣಗಳು ಇತ್ಯಾದಿ ವಲಯಗಳಲ್ಲಿ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ಬಗ್ಗೆ ಆ ಉದ್ದಿಮೆಗಳ ಅಧಿಕಾರಿಗಳ ಸಂಘ, ಕೂಡಾ ಆತಂಕ ವ್ಯಕ್ತಪಡಿಸಿದೆ. ಇಂತಹ ನೀತಿಯ ವಿರುದ್ಧ ಶಕ್ತಿಶಾಲೀ ಪ್ರತಿರೋಧ ನಿರ್ಮಿಸುವಲ್ಲಿ ಸಿ.ಪಿ.ಐ. (ಎಂ) ಹಾಗೂ ಇತರ ಎಡ ಪಕ್ಷಗಳ ಜೊತೆಗೂಡಬೇಕೆಂದು ಕೇಂದ್ರ ಸಮಿತಿ ಎಲ್ಲಾ ದೇಶಪ್ರೇಮೀ ಶಕ್ತಿಗಳಿಗೆ ಕರೆನೀಡಿದೆ. ಅದೇ ರೀತಿ ಮಾಧ್ಯಮಿಕ ಹಂತದವರೆಗೆ ಸಾರ್ವತ್ರಿಕ ಹಾಗೂ ಪುಕ್ಕಟೆ ಶಿಕ್ಷಣದ ಗುರಿ ಸಾಧನೆಗೆ ತಿಲಾಂಜಲಿಯಿತ್ತಿರುವ,

> **ದೇಶಾದ್ಯಂತ ದೇಶವನ್ನೊಡೆಯುವ ಶಕ್ತಿಗಳ ಚಟುವಟಿಕೆಗಳಿಂದಾಗಿ ಉಂಟಾಗಿರುವ ಗಂಭೀರ ಬೆದರಿಕೆಯನ್ನು ಎದುರಿಸಲು ಎಲ್ಲಾ ರೀತಿಯ ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರಚಾರದ ಒಂದು ವಾರಾಚರಣೆ ನಡೆಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ.**

ವೈಜ್ಞಾನಿಕ ಶಿಕ್ಷಣದ ಹೆಸರಿನಲ್ಲಿ ಜನಸಮೂಹಗಳನ್ನು ಅನಕ್ಷರಸ್ಥರನ್ನಾಗಿಯೇ ಉಳಿಸಿ ಆಳುವವರ್ಗಗಳ ಸೇವೆಗೆ ಬೇಕಾದ ಕೆಲವೇ ಶಿಕ್ಷಿತರನ್ನು ತಯಾರು ಮಾಡುವ ಹೊಸ ಶಿಕ್ಷಣ ನೀತಿಯನ್ನು ಕೂಡಾ ಸಮಸ್ತ ಜನತೆ ವಿರೋಧಿಸುತ್ತದೆಯೆಂದು ಕೇಂದ್ರ ಸಮಿತಿ ಆಶಿಸಿದೆ. ಈ ಬಗ್ಗೆ ಈಗಾಗಲೇ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡಿರುವುದರ ಬಗ್ಗೆ ಅದು ತೃಪ್ತಿ ಸೂಚಿಸಿದೆ.

ಐಕ್ಯತೆ, ಸಮಗ್ರತೆಗೆ ಬೆದರಿಕೆ

ಪಂಜಾಬ್ ಪ್ರಶ್ನೆ ಸ್ಪಷ್ಟಗೊಂಡಿರುವುದರ ಬಗ್ಗೆ ಹೇಳುತ್ತಾ ಕೇಂದ್ರಸಮಿತಿ ತನ್ನ ಹೇಳಿಕೆಯಲ್ಲಿ ಈಗ ಭಿನ್ನಮತೀಯ ಅಕಾಲಿಗಳ ಆಶೀರ್ವಾದದಿಂದ ಕಾರ್ಯನಿರ್ವಹಿಸುತ್ತಿರುವ ತೀವ್ರಗಾಮಿಗಳನ್ನು ಪ್ರತ್ಯೇಕಗೊಳಿಸಿ ಅವರ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದೆ. ಬಹುಭಾಷಾ ದೇಶವಾದ ಭಾರತದ ಐಕ್ಯತೆಯನ್ನು ಕಾಪಾಡಿಕೊಳ್ಳಬೇಕಾದರೆ ಅಲ್ಪ ಸಂಖ್ಯಾಂತ ಭಾಷಿಕರ ಹಕ್ಕಿನ ರಕ್ಷಣೆಯಾಗಬೇಕು. ಅಸ್ಸಾಂನಲ್ಲಿ ಎ.ಜಿ.ಪಿ. ಹಾಗೂ ಇತರ ರಾಜ್ಯಗಳಲ್ಲಿ ಇತರ ಪಕ್ಷಗಳ ಸರಕಾರಗಳು ಈ ಹಕ್ಕಿನ ರಕ್ಷಣೆ ಮಾಡುತ್ತಿಲ್ಲವೆಂದು ಕೇಂದ್ರ ಸಮಿತಿಯ ಹೇಳಿಕೆ ಗಮನಿಸಿದೆ. ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಬೆದರಿಕೆಯೊಡ್ಡಿರುವ ಇನ್ನೊಂದು ಅಂಶವೆಂದರೆ ಹಿಂದೂ, ಮುಸ್ಲಿಂ, ಹಾಗೂ ಇತರ ಮೂಲಭೂತವಾದಿ ಶಕ್ತಿಗಳ ಬೆಳವಣಿಗೆ ಎಂದು ಹೇಳಿದೆ.

ಮಿಜೋರಾಂ ಒಪ್ಪಂದದ ಬಗ್ಗೆ ಹೇಳುತ್ತಾ ಅದು ಈ ಪ್ರದೇಶದಲ್ಲಿ ದೀರ್ಘಕಾಲದ ಸಶಸ್ತ್ರ ಕಾದಾಟಗಳನ್ನು ಅಂತ್ಯಗೊಳಿಸಿದೆಯಾದರೂ ಒಬ್ಬ ದಂಗೆಕೋರ ಸೇನೆಯ ಮುಖಂಡನನ್ನು ಮುಖ್ಯಮಂತ್ರಿಮಾಡಲಾಗಿದೆ. ಹಾಗೂ ಚುನಾಯಿತ ಮುಖ್ಯ ಮಂತ್ರಿಗೆ ಒಪ್ಪಂದ ಕಾರ್ಯರೂಪಕ್ಕೆ ಬರುವ ಬಗ್ಗೆ ಅನುಮಾನಗಳಿವೆ ಎಂದು ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ತನ್ನ ಹೇಳಿಕೆಯಲ್ಲಿ ನುಡಿದಿದೆ. ಅಸ್ಥಿರತೆ ತರುವ, ಪ್ರತ್ಯೇಕವಾದೀ ಶಕ್ತಿಗಳು ಸಕ್ರೀಯರಾಗಿರುವ ಈ ಪ್ರದೇಶದಲ್ಲಿ ನೆರೆಯ ರಾಜ್ಯಗಳ ಮೇಲೆ ಈ ಒಪ್ಪಂದದ ಪ್ರಭಾವದ ಬಗ್ಗೆ ದೇಶಾದ್ಯಂತ ಭಯ ವ್ಯಕ್ತಗೊಂಡಿರುವುದು ಸ್ವಾಭಾವಿಕ ಎಂದೂ ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿದೆ.

ದೇಶಾದ್ಯಂತ ದೇಶವನ್ನೊಡೆಯುವ ಶಕ್ತಿಗಳ ಚಟುವಟಿಕೆಗಳಿಂದಾಗಿ ಉಂಟಾಗಿರುವ ಗಂಭೀರ ಬೆದರಿಕೆಯನ್ನೆದುರಿಸಲು ಎಲ್ಲಾ ರೀತಿಯ ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರಚಾರದ ಒಂದು ವಾರಾಚರಣೆ ನಡೆಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಪಕ್ಷದ ಮಹಾಧಿವೇಶನದ ನಂತರ ವಿವಿಧ ರಾಜ್ಯಗಳಲ್ಲಿ ಪಕ್ಷದ ರಾಜಕೀಯ ಹಾಗೂ ಸಂಘಟನಾ ಚಟುವಟಿಕೆಗಳು, ಪಕ್ಷದ ಸದಸ್ಯರು ದುಡಿಯುತ್ತಿರುವ ಸಾಮೂಹಿಕ ಸಂಘಟನೆಗಳ ಚಟುವಟಿಕೆಗಳ ಬಗ್ಗೆ ವರದಿಗಳನ್ನು ಆಲಿಸಿದ ಕೇಂದ್ರ ಸಮಿತಿ ಈ ದಿಕ್ಕಿನಲ್ಲಿ ಸಾಕಷ್ಟು ಮುನ್ನಡೆಯಿದ್ದರೂ, ಮಾಡಬೇಕಾದುದು ಇನ್ನೂ ಬಹಳಷ್ಟಿದೆ ಎಂದು ಅಭಿಪ್ರಾಯಪಟ್ಟಿತು.

ರಾಘವನ್‌ರವರ ಬಗ್ಗೆ

ಕೇರಳದಇತ್ತೀಚಿನರಾಜಕೀಯ, ಸಂಘಟನಾತ್ಮಕ ಬೆಳವಣಿಗೆಗಗಳನ್ನು ಪರಾಮರ್ಶಿಸಿದ ಕೇಂದ್ರಸಮಿತಿ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆ ಕಟ್ಟುವ ಪಕ್ಷದ ನೀತಿಯಿಂದಾಗಿ ಕೇರಳದ ರಾಜಕೀಯ ಸನ್ನಿವೇಶದಲ್ಲಿ ಮೂಲಭೂತ ಬದಲಾವಣೆ ಬಂದಿದೆ ಎಂದು ಹೇಳಿ ಎಂ. ವಿ. ರಾಘವನ್‌ರನ್ನು ಪಕ್ಷದಿಂದ ಹೊರ ಹಾಕಿರುವ ಕೇರಳ ರಾಜ್ಯ ಸಮಿತಿಯ ನಿರ್ಣಯಕ್ಕೆ ಅಂಗೀಕಾರ ನೀಡಿತು.

ಕಾಂಗ್ರೆಸ್ಸಿನಿಂದ ಹಾಗೂ ಅದನ್ನು ಬೆಂಬಲಿಸುವ ಪತ್ರಿಕೆಗಳಿಂದ ಎಂ. ವಿ. ರಾಘವನ್ ಪೂರ್ಣ ಬೆಂಬಲ ಪಡೆಯುತ್ತಿರುವುದು ಕಾಂಗ್ರೆಸ್ಸಿನ ವಿರುದ್ಧ ಹೋರಾಟದ ಹಿತದೃಷ್ಟಿಯಿಂದ ತಾವು ಸಿ.ಪಿ.ಐ (ಎಂ) ಮುಖಂಡತ್ವದ ವಿರುದ್ಧ ಹೋರಾಡುತ್ತಿದ್ದೇನೆ ಎಂಬ ರಾಘವನ್ ಪ್ರತಿಪಾದನೆಗೆ ಅನುಗುಣವಾಗಿದೆಯೇ ಎಂಬುದನ್ನು ಶಾಂತಚಿತ್ತದಿಂದ ಯೋಚಿಸಬೇಕೆಂದು ರಾಘವನ್ ಜೊತೆ ಒಂದಿಲ್ಲೊಂದು ರೀತಿಯಲ್ಲಿ ಕೆಲಸ ಮಾಡಿರುವ ಸಂಗಾತಿಗಳಿಗೆ ಕೇಂದ್ರ ಸಮಿತಿ ತನ್ನ ಹೇಳಿಕೆಯಲ್ಲಿ ಮನವಿ ಮಾಡಿಕೊಂಡಿದೆ.

ಮೂರು ದಿನಗಳ ಕಾಲ ನಡೆದ ಕೇಂದ್ರ ಸಮಿತಿಯ ಈ ಸಭೆ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮೋಸೆಸ್ ಮಾಬ್ಹಿಡಾ, ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಸಂಸತ್ ಸದಸ್ಯ ಸಾರಥ್ ಮುತ್ತೆತುವೆಗಾಮ ಮತ್ತು ಕಾಂಗ್ರೆಸ್ (ಜೆ) ಅಧ್ಯಕ್ಷ ಶ್ರೀ ಜಗಜೀವನ ರಾಂರವರ ನಿಧನಕ್ಕೆ ಸಂತಾಪ ಸೂಚಿಸಿ ನಿರ್ಣಯಗಳನ್ನು ಅಂಗೀಕರಿಸಿತು. ○

ರಾಜ್ಯವ್ಯಾಪಿ ಚಳುವಳಿಗೆ ಎಸ್. ಎಫ್. ಐ. ಕರೆ

ಮೈಸೂರಿನಲ್ಲಿ ಜುಲೈ 3 ರಂದು ಆರ್. ಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ಜರುಗಿದ ಎಸ್. ಎಫ್. ಐ ರಾಜ್ಯ ಸಮಿತಿ ಸಭೆಯು ಕರ್ನಾಟಕದ ವಿದ್ಯಾರ್ಥಿ ಸಮುದಾಯವು ಎದುರಿಸುತ್ತಿರುವ ಪ್ರಮುಖ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯವ್ಯಾಪಿ ಚಳುವಳಿ ಹೂಡಲು ನಿರ್ಧರಿಸಿದೆ. ಕೇಂದ್ರ ಸರಕಾರದ ಜನವಿರೋಧಿ ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿ ಜುಲೈ 25 ರಂದು ಪ್ರತಿಭಟನಾ ದಿನಾಚರಣೆಗೆ ಕರೆ ನೀಡಲಾಗಿದೆ. ಇದರೊಂದಿಗೆ ಡೊನೇಷನ್-ಕ್ಯಾಪಿಟೇಶನ್ ಫೀ ಹಾವಳಿ, ಪಠ್ಯ ಪುಸ್ತಕಗಳ ಸರಬರಾಜು, ಶಿಕ್ಷಕರ ಕೊರತೆ, ವಿಶ್ವವಿದ್ಯಾಲಯಗಳ ಸೆನೆಟ್‌ಗಳಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯಕ್ಕೆ ಶೀಘ್ರ ಚುನಾವಣೆ, ಕರ್ನಾಟಕ ಶಿಕ್ಷಣ ಮಸೂದೆ (1983) ಗೆ ಅಂಗೀಕಾರ, ಇತ್ಯಾದಿ ಪ್ರಶ್ನೆಗಳ ಕುರಿತು ಸಮಾನ ಧೋರಣೆಯ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಐಕ್ಯ ಹೋರಾಟ ರೂಪಿಸಲು ಉದ್ದೇಶಿಸಲಾಗಿದೆ. ವಿದ್ಯಾರ್ಥಿ ಸಂಘಗಳ ರಚನೆಯ ಪ್ರಜಾಪ್ರಭುತ್ವ ಹಕ್ಕನ್ನು ರಕ್ಷಿಸಲು ಹೋರಾಡುವಂತೆ ಎಸ್. ಎಫ್. ಐ ಶಾಖೆಗಳಿಗೆ ಆದೇಶ ನೀಡಲಾಗಿದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸ್ಥಳೀಯ ಬೇಡಿಕೆಗಳಿಗೆ ಹೋರಾಟ ಪ್ರಾರಂಭಿಸಲು ಕರೆ ನೀಡಲಾಗಿದೆ. ಮೇಲಿನ ಗುರಿ ಸಾಧನೆಗಾಗಿ ರಾಜ್ಯ ಮಟ್ಟದ 'ಶಿಕ್ಷಣ ರಕ್ಷಣಾ ಸಮಿತಿ' ಯೊಂದನ್ನು ರಚಿಸಲು ವಿದ್ಯಾರ್ಥಿ ಹಾಗೂ ಸಿಬ್ಬಂದಿ ವರ್ಗದ ಸಂಘಟನೆಗಳೊಂದಿಗೆ ಸಮಾಲೋಚನೆ ಮಾಡಲಾಗುವುದು.

1986ನೇ ಸಾಲಿನಲ್ಲಿ ರಾಜ್ಯದಲ್ಲಿ 50 ಸಹಸ್ರ ಸದಸ್ಯತ್ವ ನೊಂದಾಯಿಸುವ ಗುರಿಯನ್ನು ಹೊಂದಲಾಗಿದೆ. ರಾಜ್ಯ ಸಮಿತಿ ನಿಧಿಗೆ 20 ಸಾವಿರ ರೂಗಳನ್ನು ಸಂಗ್ರಹಿಸಲು ನಿರ್ಧರಿಸಲಾಗಿದೆ. ಆಗಸ್ಟ್ ತಿಂಗಳಲ್ಲಿ ಸಂಘಟಿತ ವಿದ್ಯಾರ್ಥಿ ಚಳುವಳಿಯ ಸುವರ್ಣ ಮಹೋತ್ಸವವನ್ನು ಆಚರಿಸಲಾಗುವುದು. ಆಗಸ್ಟ್ 6ರಂದು ಹಿರೋಷಿಮಾ ದಿನಾಚರಣೆಯಅಂಗವಾಗಿ ಅಂತರಾಷ್ಟ್ರೀಯ ಶಾಂತಿವರ್ಷದ ಸಂದರ್ಭದಲ್ಲಿ ವಿಶ್ವ ಶಾಂತಿ ರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಶಾಲಾ-ಕಾಲೇಜುಗಳಲ್ಲಿ ವಿಚಾರ ಸಂಕಿರಣಗಳನ್ನು ಏರ್ಪಡಿಸಲು ತೀರ್ಮಾನಿಸಲಾಗಿದೆ. ಮೈಸೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಯಶಸ್ವಿಗೊಳಿಸಲು ಸಹಕರಿಸಿದ ಎಸ್. ಎಫ್. ಐ. ನ ಎಲ್ಲಾ ಶಾಖೆಗಳಿಗೂ ಮತ್ತು ಸಂಗಾತಿಗಳಿಗೂ ರಾಜ್ಯ ಸಮಿತಿಯು ಅಭಿನಂದನೆ ಸಲ್ಲಿಸಿದೆ. ಶಿಬಿರವನ್ನು ಏರ್ಪಡಿಸಲು ಶ್ರಮಿಸಿದ ಮೈಸೂರು ಜಿಲ್ಲಾಸಮಿತಿ ಮತ್ತು ಸ್ವಾಗತ ಸಮಿತಿಯನ್ನು ವಿಶೇಷವಾಗಿ ಅಭಿನಂದಿಸಿದೆ. ಜುಲೈ ತಿಂಗಳಿನಾದ್ಯಂತ ಜಿಲ್ಲಾ ಮಟ್ಟದ ಒಂದು ದಿನದ ಶಿಬಿರಗಳನ್ನು ನಡೆಸಲಾಗುವುದು ಎಂದು ಕಾರ್ಯದರ್ಶಿ ಎಸ್. ಆರ್. ಆರಾಧ್ಯ ತಿಳಿಸಿದ್ದಾರೆ. ○

ವಾಸ್ತವಕ್ಕೆ ಕುರುಡಾದ ಭಿನ್ನಮತೀಯ, ರಾಘವನ್

—ಕಾ|| ಬಾಲಾನಂದನ್

ದಿನಾಂಕ 10-7-86 ರಂದು ಬೆಂಗಳೂರಿನ ಸರಕಾರಿ ನೌಕರರ ಭವನದ ಸಭಾಂಗಣದಲ್ಲಿ ಪಕ್ಷದ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದ ಕಾ|| ಬಾಲಾನಂದನ್‌ರವರು, ಇಂದಿನ ವಾಸ್ತವ ಪರಿಸ್ಥಿತಿಯನ್ನು ಕಾಣದಿದ್ದುದರಿಂದ ಅದನ್ನು ಸರಿಯಾಗಿ ವಿಮರ್ಶೆ ಮಾಡದಿದ್ದುದರಿಂದ ರಾಘವನ್‌ರವರಲ್ಲಿ ದೌರ್ಬಲ್ಯ ಮೂಡುವುದಕ್ಕೆ ಕಾರಣವಾಯಿತು. ಧರ್ಮಾಂಧತೆ ಅತಿಯಾಗಿ ಬೆಳೆಯುತ್ತಿರುವಾಗ, ಭಾರತದಐಕ್ಯತೆಸಮಗ್ರತೆಗೆ, ಅಪಾಯ, ಒದಗಿರುವಾಗ ಸಿ.ಪಿ.ಐ. (ಎಂ) ಜಾತಿವಾದಿ ಪಕ್ಷಗಳೊಡನೆ ಹೊಂದಾಣಿಕೆ ಮಾಡಬಾರದೆಂಬ ತತ್ವನಿಷ್ಠ ನಿಲುವನ್ನು ತಳೆಯಿತು. ಈ ನಿಲುವು ರಾಜಕೀಯ ಪ್ರಜ್ಞೆಯುಳ್ಳ ಜನರಿಂದ ಪ್ರಶಂಸೆಗೆ ಪಾತ್ರವಾಯಿತು. ಪಕ್ಷದ ಅಧಿವೇಶನ ಚರ್ಚಿಸಿದ ನಂತರ ಈ ನಿಲುವನ್ನು ತಳೆಯಲಾಗಿದೆ ಪಕ್ಷದ ಮಿತ್ರರು, ಶತ್ರುಗಳು ಕೂಡ ಚರ್ಚೆ ನಡೆಸಿದ್ದಾರೆ.

ಧರ್ಮಾಂಧ, ಜಾತಿವಾದಿ ರಾಜಕೀಯಕ್ಕೆ ಎದುರಾಗಿ ಜನರಲ್ಲಿ ಪ್ರಜ್ಞೆ ಬೆಳೆಯುತ್ತಿರುವಾಗ, ಒಗ್ಗೂಡುತ್ತಿರುವಾಗ ಎಂ. ವಿ. ರಾಘವನ್ ಪಕ್ಷದ ಒಳಗಡೆ ಹೋರಾಟದ ಕಹಳೆಯನ್ನು ಊದಿದರು. ಮೊದಲು ಸಿ.ಪಿಐ.(ಎಂ)ಗೆ ಜಾತೀವಾದಿ, ಧಾರ್ಮಿಕವಾದಿ ಪಕ್ಷಗಳೊಡನೆ ಸಂಬಂಧ ಇತ್ತು. ಆಗ ಸಂಬಂಧ ಇರಬಹುದಾದರೆ ಈಗ ಏಕೆ ಸಂಬಂಧ ಇಟ್ಟುಕೊಳ್ಳಬಾರದು ಎಂಬುದು ರಾಘವನ್ ಪ್ರಶ್ನೆ- ಅಂದಿನ ಪರಿಸ್ಥಿತಿ ಇಂದು ಇಲ್ಲ. ಉದಾಹರಣೆಗೆ ಪಂಜಾಬ್ ಘಟನೆಗಳನ್ನು ನೋಡಿದರೆ ಧರ್ಮ ಮತ್ತು ರಾಜಕೀಯ ಒಂದರಲ್ಲೊಂದು ಬೆರೆತಾಗ ಸಂಭವಿಸುವ ದುಷ್ಫಲವನ್ನು ನಾವು ಇಂದು ಅನುಭವಿಸುತ್ತಿದ್ದೇವೆ.

ಸಿ. ಪಿ. ಐ. (ಎಂ) ಪಕ್ಷ ಧರ್ಮ ವಿರೋಧಿಯೂ, ಧರ್ಮ ಪರವೂ ಅಲ್ಲ ಇಡೀ ಜಗತ್ತಿನ ಇತಿಹಾಸ ಕಮ್ಯೂನಿಸ್ಟರು ಜನಗಳ ಪ್ರಗತಿಗೆ ಯಾವುದೇ ಅಡ್ಡಿ ಬಂದರೂ ಅದನ್ನು ಒದ್ದು ಮುಂದೆ ಹೋಗುತ್ತಾರೆ ಎಂಬುದನ್ನು ತೋರಿಸಿದೆ. ಭ್ರಷ್ಟಾಚಾರದಲ್ಲಿ ಮುಳುಗಿ ಏಳುತ್ತಿರುವ ಇಂದಿನ ಕೇರಳ ಸಂಯುಕ್ತ ರಂಗದಿಂದ ಕೇರಳ ಕಾಂಗ್ರೆಸ್, ಹಾಗೂ ಮುಸ್ಲಿಂ ಲೀಗನ್ನು ಬಿಡಿಸಿ ಅವರ ಜೊತೆ ಸೇರಿ ಸರಕಾರ ರಚಿಸಬೇಕೆನ್ನುವುದೊಂದು ಅಧಿಕಾರದ ವ್ಯಾಮೋಹ, ರಾಘವನ್ ಮತ್ತು ಅವರ ಸಹವರ್ತಿಗಳ ಮೇಲೆ ಕ್ರಮ ಜರುಗಿಸಬೇಕೆನ್ನುವುದು ಪಕ್ಷದ 12ನೇ ಅಧಿವೇಶನದ ತೀರ್ಮಾನ. ರಾಘವನ್‌ರವರು ಮಾಡಿದ ಅಪರಾಧದ ತೀವ್ರತೆ ಎಂತಹುದೆಂದರೆ ಆ ದಿನವೇ ಅವರನ್ನು ಪಕ್ಷದಿಂದ ತೆಗೆದು ಹಾಕಬಹುದಾಗಿತ್ತು. ಆದರೆ ಪಕ್ಷ ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಸಮಯ ನೀಡಿತು. ಈ ಸಮಯವನ್ನು ಅವರು ತಮ್ಮ ಗುಂಪನ್ನು ಬಲಗೊಳಿಸುವುದಕ್ಕೂ, ಬಂಡವಾಳಶಾಹಿ ಪತ್ರಿಕೆಗಳ ಸಹಾಯ ಪಡೆದು ತಮ್ಮ ನೀತಿಗೆ ಪ್ರಚಾರ ಪಡೆಯುವುದಕ್ಕೂ ಉಪಯೋಗಿಸಿದರು. ಈ ಕಾರಣಕ್ಕಾಗಿ ಅವರನ್ನು ಪಕ್ಷದಿಂದ ಹೊರಹಾಕಲಾಯಿತು. ಜನರ ಮುಂದಿರುವ ಎರಡು ಧೋರಣೆಗಳನ್ನು ಜನರೇ ಚರ್ಚಿಸಿ ಸರಿಯಾದುದನ್ನು ಒಪ್ಪುತ್ತಾರೆ. ಈ ವಿಷಯದಲ್ಲಿ ಸಂಶಯ ಬೇಡ. ಮಲಬಾರ್‌ನಲ್ಲೆಲ್ಲಾ ನಾನು ಪ್ರವಾಸ ಮಾಡಿದ್ದೇನೆ, ಬಂಡವಾಳಶಾಹಿ ಪತ್ರಿಕೆಗಳು ಈ ಬಗ್ಗೆ ಸಿ. ಪಿ ಐ. (ಎಂ) ವಿರುದ್ಧ ನಡೆಸಿರುವ ಅಬ್ಬರದ ಪ್ರಚಾರದಲ್ಲಿ ಹುರುಳಿಲ್ಲ ಎಂದರು.

ಬಿಜಾಪುರ

ರೈತರ ಹೋರಾಟಕ್ಕೆ ಜಯ

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹೊರ್ತಿ ಗ್ರಾಮದಲ್ಲಿ ಜಿಲ್ಲಾ ರೈತ ಸಂಘದ ಮುಖಂಡತ್ವದಲ್ಲಿ ತಾ 11ರಂದು ನಡೆದ ರಸ್ತೆ ರೋಕೋ ಪ್ರಚಂಡ ಮತ ಪ್ರದರ್ಶನದ ಪರಿಣಾಮವಾಗಿ ಹಲವಾರು ತಿಂಗಳಿಂದ ನನೆಗುದಿಗೆ ಬಿದ್ದಿದ್ದ ಸಮಸ್ಯೆಗಳಿಗೆ ಸ್ವಲ್ಪ ಪರಿಹಾರ ದೊರೆತಂತಾಗಿದೆ. ಸ್ವತಃ ಅಸಿಸ್ಟೆಂಟ್ ಕಮಿಶನರ್ ಮತ್ತು ತಹಶೀಲದಾರರು ಮತಪ್ರದರ್ಶಕರನ್ನುದ್ದೇಶಿಸಿ ಭೀಮಾನದಿಗೆ ಎರಡು ಬಂದಾರಗಳು ಮಂಜೂರಾಗಿದ್ದು ಕೆಲಸ ಪ್ರಾರಂಭಿಸುವುದಾಗಿಯೂ, ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸರಕಾರಕ್ಕೆ ಶಿಫಾರಸ್ಸು ಮಾಡುವುದಾಗಿಯೂ, ಹೊರ್ತಿ ಗ್ರಾಮಕ್ಕೆ ನೀರಿನ ವ್ಯವಸ್ಥೆ ಮಾಡಿ, ಬಸ್ ಸ್ಟ್ಯಾಂಡ್ ಕಟ್ಟುವುದಾಗಿಯೂ, ಭ್ರಷ್ಟಾಚಾರಿ ಗ್ರಾಮ ಲೆಕ್ಕಾಧಿಕಾರಿಯನ್ನು ಬದ್ಲಿ ಮಾಡಿ ಹೊಸಬರನ್ನು ನೇಮಿಸಿರುವುದಾಗಿಯೂ, ಡಾ|| ಬೊಂಡರ್ಡೆಯವರನ್ನು ಬದ್ಲಿ ಮಾಡಲು ಶಿಫಾರಸ್ಸು ಮಾಡುವುದಾಗಿ ಸಾರಿದರು.

ರೈತರು ಶಾಂತ ರೀತಿಯಿಂದ ಮತ ಪ್ರದರ್ಶನ ನಡೆಸುತ್ತಿದ್ದಾಗ, ಬೊಂಡರ್ಡೆಯ ಬೆಂಬಲಿಗರು ರೈತರ ಹಾಗೂ ಪೋಲೀಸರ ಮೇಲೆ ಕಲ್ಲು ತೂರಿದಾಗ ಪೋಲೀಸರು ಲಾಠಿ ಚಾರ್ಜ್ ಮಾಡಿದ್ದು ಸರಿಯಲ್ಲೆಂದು ಹೇಳಿ ಕ್ಷಮೆ ಕೇಳಿದರು. ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿಯವರು ರೈತರನ್ನುದ್ದೇಶಿಸಿ ಭಾಷಣ ಮಾಡಿ ಹೋರಾಟದಿಂದಲೇ ಜನರ ಬೇಡಿಕೆ ಪಡೆಯಲು ಸಾಧ್ಯವೆಂದು ಹೇಳಿ ರೈತರೆಲ್ಲಾ ಒಗ್ಗಟ್ಟಾಗಬೇಕೆಂದು ಕರೆ ನೀಡಿದರು.

ಗುಲ್ಬರ್ಗಾ

ರೈತ ಸಂಘದ ಜಾಥಾ

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯು ಕಾ. ಅರುಣ ಕುಮಾರ ಮನೋಕರ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರೈತರ ಸಮಸ್ಯೆಗಳನ್ನು ಕುರಿತು ಚರ್ಚಿಸಿತು.

ಬರಗಾಲಕ್ಕೆ ಶಾಶ್ವತ ಪರಿಹಾರ ಒದಗಿಸಲು ಗುಲ್ಬರ್ಗಾ ಜಿಲ್ಲೆಯ ಮೇಲ್ದಂಡೆ ಯೋಜನೆ, ಅಮರ್ಜಾ ಯೋಜನೆ, ಬೆಣ್ಣೆ ತೋರೆ ಯೋಜನೆ, ಗಂಡೋರಿ ನಾಲಾ ಯೋಜನೆಗಳಿಗೆ ಹೆಚ್ಚಿನ ಹಣಕಾಸು ಒದಗಿಸಿ ಬೇಗನೆ ಪೂರ್ಣಮಾಡಬೇಕೆಂದು ಎನ್.ಆರ್. ಇ.ಪಿ. ಮತ್ತು ಆರ್.ಎಲ್ ಜಿ.ಇ.ಪಿ. ಯಲ್ಲಿಕೃಷಿಕರಿಗೆಕೆಲ್ಸಒದಗಿಸಲುಕೃಷ್ಣಾ ಗ್ರಾಮೀಣ ರಿಫೈನಾನ್ಸ್ ಒದಗಿಸಲು ಬ್ಯಾಂಕ್ ಸಾಲದ ನೀತಿಯನ್ನು ಬದಲಿಸಲು, ಬಡ ರೈತರು ಉಳಿಮೇ ಮಾಡಿದ ಸರಕಾರೀ ಜಮೀನು ಪಟ್ಟಾ ಮಾಡಿಕೊಡಲು, ಕನಿಷ್ಠ ಕೃಷಿ ಉತ್ಪನ್ನಗಳಿಗೆ ಬೆಂಬಲಿತ ಬೆಲೆ ನಿಗದಿಪಡಿಸಿ ಕಾರ್ಪೊರೇಶನ್ ಫೆಡರೇಶನ್‌ನ ಮೂಲಕ ಖರಿದಿಸಲು ಎಲ್ಲಾ ಕೃಷಿ ಕೂಲಿಕಾರ ಬಡ ರೈತರಿಗೆ ಹಸಿರು ಕಾರ್ಡ್ ಕೊಟ್ಟು, ತಲಾ 10 ಕೆ.ಜಿ ಉತ್ತಮ ಅಕ್ಕಿ ಒದಗಿಸಬೇಕೆಂದು ಮತ್ತು ಬೀಜ ಕ್ರಿಮಿನಾಶಕಗಳಲ್ಲಿ ಕಲಬೆರಿಕೆ ತಪ್ಪಿಸಬೇಕೆಂದು ಮುಂತಾದ ಹತ್ತು ಬೇಡಿಕೆಗಳಿಗೆ ಒತ್ತಾಯಿಸಿ ಜುಲೈ ತಿಂಗಳಲ್ಲಿ ಹಳ್ಳಿಗಳಿಗೆ ತಾಲೂಕುವಾರು ಜಾಥಾ ನಡೆಸಿ ಆಗಸ್ಟ 1 ರಂದು ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಬೃಹತ್ ಮತ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಲಾಗುವುದೆಂದು ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತದ್ವಾರ

3ನೇ ಪುಟದಿಂದ

ರತ್ತುಗಳು ಅನೇಕ ದುಷ್ಪರಿಣಾಮಗಳಿಗೆ ಅವಕಾಶ ಕೊಡುವುವು. ಇನ್ನು ಮುಂದೆ ONGC ದೂರ ಸಮುದ್ರದಲ್ಲಿ ತೈಲಶೋಧನೆ ನಡೆಸುವ ಹಕ್ಕನ್ನು ಕಳೆದುಕೊಳ್ಳುವುದು. ಅಲ್ಲದೆ, ಅದರ ಹತ್ತಾರು ವರ್ಷಗಳಿಂದ ಗಳಿಸಿದ ಅಮೂಲ್ಯವಾದ ಎಲ್ಲಾ ಭೌಗೋಳಿಕ ತಾಂತ್ರಿಕ ಮಾಹಿತಿಗಳನ್ನು ತನ್ನದೇ ಆದ ಶೋಧನೆ- ಉತ್ಪಾದನೆಯಮಾಹಿತಿಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬಿಟ್ಟುಕೊಡಬೇಕಾಗುವುದು.

ತೈಲಶೋಧನೆಯಲ್ಲಿ ಒಮ್ಮೆ ಏಕಸ್ವಾಮ್ಯ ಪಡೆದನಂತರ, ಈ ಸಂಸ್ಥೆಗಳು ಶೋಧನಾ ಕಾರ್ಯಗಳನ್ನು ಕಾಲಬದ್ಧವಾಗಿ ಮುಂದುವರಿಸದೇ ಇರಬಹುದು. ತೈಲ ಉತ್ಪಾದನೆ ಮಾಡಿದಾಗ ಈ ಸಂಸ್ಥೆಗಳು ಭಾರತಕ್ಕೆ ಒಂದುಬ್ಯಾರಲ್ ತೈಲವನ್ನೂ ಕೊಡದಿರಬಹುದು. ಆಗ ಭಾರತ ತನ್ನ ನೆಲದ ತೈಲವನ್ನೇ ಬಹುರಾಷ್ಟ್ರೀಯ ಸಂಸ್ಥೆಗಳಿಂದಅಂತರ್ರಾಷ್ಟ್ರೀಯದರದಲ್ಲಿ ಖರೀದಿ ಮಾಡಬೇಕಾಗುವುದು. ಈ ಸಂಸ್ಥೆಗಳು ತೈಲದ ಅಂತರರಾಷ್ಟ್ರೀಯ ಬೆಲೆಯ ಇಳಿಮುಖವಿರುವಾಗ ಭಾರತದ ಪಾಲನ್ನು ಬಿಟ್ಟುಕೊಟ್ಟು, ಏರಿಕೆಯ ದರವಿರುವಾಗ ಪಾಲಿನ ತೈಲವನ್ನು ಭಾರತಕ್ಕೆ ಅಧಿಕ ಬೆಲೆಯಲ್ಲಿ ಮಾರಬಹುದು! ಸದ್ಯ ತೈಲದ ಅಂತರಾಷ್ಟ್ರೀಯ ದರ ಇಳಿಮುಖವಾಗಿರುವುದರಿಂದ ಒಂದೆಡೆ ಜಾಗತಿಕ ಬ್ಯಾಂಕು ಭಾರತ ತೈಲ ಉತ್ಪಾದನೆ ಸ್ಥಗಿತಗೊಳಿಸಿ ಅಗ್ಗದಲ್ಲಿ ಆಮದು ಮಾಡಿಕೊಳ್ಳಬೇಕೆಂದು ಸಲಹೆ ಕೊಡುತ್ತಿದೆ. ಇನ್ನೊಂದೆಡೆ, ಮುಂದಿನ ತೈಲಶೋಧನೆ, ಉತ್ಪಾದನೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬಿಟ್ಟುಕೊಡಬೇಕೆಂದು ಸಲಹೆ ಮಾಡುತ್ತಿದೆ. ಈ ಸಲಹೆಗಳನ್ನು ಒಪ್ಪಿಕೊಳ್ಳುವ ರಾಜೀವ್ ಗಾಂಧಿ ಸರಕಾರ ದೇಶದ ಭದ್ರತೆ, ಸ್ವಾತಂತ್ರ್ಯ, ಸ್ವಾವಲಂಬನೆ, ವಿದೇಶಿ ಶಕ್ತಿಗಳಿಗೆ ಮಾರಿಕೊಳ್ಳಲು ಸಿದ್ಧವಾಗಿದೆ ಎಂದು ತಿಳಿಯುವುದು ! 1971 ರಲ್ಲಿ ಬಾಂಗ್ಲಾ ವಿಮೋಚನೆಗೆ ಭಾರತ ನೆರವು ನೀಡಿದಾಗ ಈ ಬಹುರಾಷ್ಟ್ರೀಯ ಸಂಸ್ಥೆಗಳು ತೈಲಸರಬರಾಜು ತಡೆಹಿಡಿಯುವುದಾಗಿ ಬೆದರಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ತಾಂತ್ರಿಕ ಸಲಹೆಯಲ್ಲಿ ಬಹು ರಾಷ್ಟ್ರೀಯ ಸಂಸ್ಥೆಗಳು

ದೇಶಕ್ಕೆ ತಾಂತ್ರಿಕ ನೆರವು ನೀಡುವ ನೆಪದಲ್ಲಿ ಅಮೇರಿಕದಲ್ಲಿ ಹತ್ತಾರು ವರ್ಷಗಳಿಂದ ನೆಲೆ ನಿಂತಿರುವ ಯೋಜನಾ ಆಯೋಗದ ಮಾಜಿ ಸದಸ್ಯನಾದ ಎಂ. ಎಸ್. ಪಾಠಕ್ (ಮಾಜಿ ಉಪರಾಷ್ಟ್ರಪತಿ ಪಾಠಕ್‌ರ ಮಗ) ಇದ್ದಕ್ಕಿದ್ದಂತೆ ಭಾರತದಲ್ಲಿ ಪ್ರತ್ಯಕ್ಷವಾಗಿ ಬಹು ರಾಷ್ಟ್ರೀಯ ಸಂಸ್ಥೆಗಳಿಂದ ಪ್ರೇರಿತವಾದ ಒಂದು ತಾಂತ್ರಿಕ ಸಲಹಾ ಸಂಸ್ಥೆಯನ್ನು ಜಂಟಿ ಕ್ಷೇತ್ರದಲ್ಲಿ ಸ್ಥಾಪಿಸಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಅದೇ ಪಾಠಕ್ ಬೆಚ್ಟಲ್ (Bechtel) ಕಾರ್ಪೊರೇಶನ್.

ಭಾರತದ ರಸಾಯನಿಕ ಮತ್ತು ಪೆಟ್ರೋಲಿಯಂ ಖಾತೆಯ ಕಾರ್ಯದರ್ಶಿ ಡಿ. ವಿ. ಕಪೂರ್, ಭಾರತದ ಉಕ್ಕು ಕಂಪನಿಗಳಒಕ್ಕೂಟದ(SAIL) ಅಧ್ಯಕ್ಷ ವಿ. ಕೃಷ್ಣಮೂರ್ತಿ ಹಾಗೂ ಅರುಣ ನೆಹರು (ಕೇಂದ್ರ. ಮಂತ್ರಿ)ವಿನ ಕೃಪಾಕಟಾಕ್ಷದಿಂದ ಸಾರ್ವಜನಿಕ ರಂಗದ ಎಲ್ಲಾ ಉದ್ಯಮ ಸಂಸ್ಥೆಗಳು ಮೇಲಿನ "ತಾಂತ್ರಿಕ ಸಲಹಾ ಸಂಸ್ಥೆ" ಯಿಂದ ಕಡ್ಡಾಯವಾಗಿ ತಾಂತ್ರಿಕ ಸಲಹೆ ಪಡೆಯಬೇಕೆಂಬ ಆದೇಶ ಹೊರಡಿಸಲಾಗಿದೆ.

ಏಳನೇ ಯೋಜನೆಯಲ್ಲಿ ಸಾರ್ವಜನಿಕರಂಗಕ್ಕೆ ಒಟ್ಟು ರೂ 1,80,000 ಕೋಟಿ ಮತ್ತು ವಿಜ್ಞಾನ, ತಂತ್ರಜ್ಞಾನ, ಅನ್ವೇಷಣೆ, ಅಭಿವೃದ್ಧಿ, ಪ್ರಯೋಗಗಳಿಗೆ ರೂ 2466 ಕೋಟಿ ಮೀಸಲಾಗಿಡಲಾಗಿದೆ. (ಏಳನೇ ಯೋಜನೆ ಸಂಪುಟ 50 ಪುಟ, 27-28) ಇದರಲ್ಲಿ ಸಿಂಹಪಾಲನ್ನು ಕಬಳಿಸಲು, ಸಾರ್ವಜನಿಕ ಉದ್ಯಮ ಸಂಸ್ಥೆಗಳ ಮೇಲೆ ತಮ್ಮ ನಿಯಂತ್ರಣ ಸ್ಥಾಪಿಸಲು

ಪಾಠಕ್ ಸಂಸ್ಥೆ ಬಹುರಾಷ್ಟ್ರೀಯ ಸಂಸ್ಥೆಗಳ ಏಜೆಂಟ್ ಸಂಸ್ಥೆಯಾಗಿ ಸ್ಥಾಪಿತಗೊಂಡಿರುವುದು ಈಗ ಸ್ಪಷ್ಟವಾಗುತ್ತಿದೆ. ಇಷ್ಟೊಂದು ದುಬಾರಿ ದರದಲ್ಲಿ ಅನಗತ್ಯವಾದ ಆಡಳಿತ. ತಾಂತ್ರಿಕ ಸಲಹೆಗಳನ್ನು ಪಡೆಯುವುದೆಂದರೆ, ದೇಶದ ಸಂಪನ್ಮೂಲಗಳನ್ನು ಪೋಲುಮಾಡಿದಂತೆ, ಸಾರ್ವಜನಿಕ ಸಂಸ್ಥೆಗಳ ಹಾಗೂ ಇಡೀ ದೇಶದ ಸ್ವಾವಲಂಬನೆ, ಸ್ವಾತಂತ್ರ್ಯವನ್ನು ವಿದೇಶಿ ಪಿತೂರಿಗಾರರಿಗೆ, ಲಾಭ ಬಡುಕರಿಗೆ ಮಾರಿಕೊಂಡಂತೆ.

ಬಹುರಾಷ್ಟ್ರೀಯ ಸಂಸ್ಥೆಗಳ ರಾಷ್ಟ್ರ ಘಾತುಕತಂತ್ರದ ಈ ಜಾಲವನ್ನು ದೇಶದ ಪ್ರಜ್ಞಾವಂತ ರಾಷ್ಟ್ರಪ್ರೇಮಿ ಜನರು ಬಯಲುಗೊಳಿಸಿ ಕಿತ್ತೊಗೆಯಲಾರರೇ ?

— ಆರ್. ಚಂದ್ರ

ಮುನಿರಾಬಾದಿನಲ್ಲಿ ಡಿವೈಎಫ್‌ಐ ಘಟಕ

ಮುನಿರಾಬಾದ್ ಕ್ಯಾಂಪಿನಲ್ಲಿಈಗಾಗಲೇ DYFi ಸ್ಥಾಪನೆಗೊಂಡು ಒಂದು ವರ್ಷಕ್ಕೂ ಮೀರಿದೆ. ಈಗ ಮತ್ತೊಂದು DYFi ನ ಘಟಕ ಮುನಿರಾಬಾದಿನ ಚರ್ಚ್ ಏರಿಯಾದಲ್ಲಿ ರಚನೆಯಾಗಿದೆ. ಇಲ್ಲಿ ಮಾರ್ಚ್ ಮೊದಲ ವಾರದಲ್ಲಿ ನಿರುದ್ಯೋಗವಿರೋಧಿ ದಿನಾಚರಣೆಗೆ ಒಟ್ಟು 40ಜನ ಸಂಗಾತಿಗಳು ಭಾಗವಹಿಸಿದ್ದರು.

ಅಂತರ್ರಾಷ್ಟ್ರೀಯ ರಂಗದಲ್ಲಿ

ನಿಶ್ಶಸ್ತ್ರೀಕರಣ ಮಾತುಕತೆಗೆ

ಅಮೇರಿಕಾದ 'ರಣಹದ್ದು'ಗಳಿಂದ ವಿಘ್ನ

ಕಳೆದ ತಿಂಗಳು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮೈಕೇಲ್ ಗೋರ್ಬಚೋವ್ ಹಂತ ಹಂತವಾಗಿ ನಿಶ್ಶಸ್ತ್ರೀಕರಣದ ಸೂಚನೆಗಳನ್ನು ನೀಡಿದ್ದರು. ಆದರೆ ಅಮೇರಿಕಾ ಸಚಿವ ಸಂಪುಟದಲ್ಲಿ ತೀವ್ರ ಭಿನ್ನಾಭಿಪ್ರಾಯ ಉಂಟಾಗಿ ಮಾತುಕತೆಗಳ ಆರಂಭ ವಿಳಂಭವಾಗಿದೆ. ಅಮೇರಿಕಾ ತನ್ನ ಭಯಂಕರ "ತಾರಾ ಸಮರ" ಕಾರ್ಯಕ್ರಮಗಳನ್ನು ಮುಂದಿನ ಹದಿನೈದು ವರ್ಷಗಳ ಕಾಲ ಕೇವಲ ಪ್ರಯೋಗಾಲಯಗಳಲ್ಲಿ ಸಂಶೋಧನೆ ನಡೆಸುವಷ್ಟಕ್ಕೆ ಮಾತ್ರ ಸೀಮಿತಗೊಳಿಸಿದಲ್ಲಿ ಸೋವಿಯತ್ ಒಕ್ಕೂಟವು ತನ್ನ ಆಯಕಟ್ಟಿನ ಕ್ಷಿಪಣಿಗಳ ಸಂಖ್ಯೆಯನ್ನು ತಕ್ಷಣ ಶೇ. 35 ರಷ್ಟು ಕಡಿತಗೊಳಿಸುವುದೆಂದು ಗೋರ್ಬಚೋವ್ ಆಶ್ವಾಸನೆ ನೀಡಿದ್ದರು.

"ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯ ವಾಷಿಂಗ್‌ಟನ್ ವರದಿಗಾರ ಕಳುಹಿಸಿರುವ ವರದಿಯಂತೆ ರೀಗನ್ನರ ಸಚಿವ ಸಂಪುಟದಲ್ಲಿ ವಿದೇಶಾಂಗ ಕಾರ್ಯದರ್ಶಿಯವರನ್ನೂ ಒಳಗೊಂಡು ಅನೇಕಮುಖಂಡರು ಗೋರ್ಬಚೋವ್ ಅವರ ಪ್ರಸ್ತಾಪದ ಕುರಿತು ಮಾತುಕತೆ ನಡೆಸುವುದು ಸೂಕ್ತವೆಂದು ಹೇಳುತ್ತಿದ್ದಾರೆ. ಆದರೆ ಅಮೇರಿಕಾದ ಖಾಸಗೀ ಶಸ್ತ್ರಾಸ್ತ್ರ ಕೈಗಾರಿಕೆಯ ವಕೀಲರಂತೆ ವರ್ತಿಸುತ್ತಿರುವ ರಕ್ಷಣಾ ಕಾರ್ಯದರ್ಶಿ ಹಾಗೂ ಅವರ ಸುತ್ತಲಿನ ರಣಹದ್ದುಗಳು ತಾರಾ ಸಮರ ಯೋಜನೆಯನ್ನು ಕೈಬಿಡಬಾರದೆಂದು ರೀಗನ್ ಅವರನ್ನು ಒತ್ತಾಯಿಸುತ್ತಿದ್ದಾರೆ. ಸೋವಿಯತ್ ಒಕ್ಕೂಟ ನೀಡಿರುವನಿಶ್ಶಸ್ತ್ರೀಕರಣದ ಎಲ್ಲಾ ಸೂಚನೆಗಳನ್ನೂ ನಿರಾಕರಿಸುವ, ವಿಶ್ವದ ಉಳಿವಿಗೆ ಮಾರಕವಾಗುವ ಶಸ್ತ್ರಾಸ್ತ್ರಗಳ ತಯಾರಿಕೆಯಿಂದ ಲಾಭಪಡೆಯಲಿಚ್ಛಿಸುವ ಈ ಮಂದಿ, "ತಾರ ಸಮರ" ದಿಂದ ಸಾವಿರಾರು ಕೋಟಿ ಡಾಲರುಗಳ ಲಾಭಕ್ಕಾಗಿ ಬಾಯ್ಬಿಡುತ್ತಿದ್ದಾರೆ. ಆದರೆ ನೂರಾರು ಬಿಲಿಯ ಡಾಲರುಗಳ ವೆಚ್ಚದಲ್ಲಿ "ತಾರಾ ಸಮರ" ಯೋಜನೆಯನ್ನು ಕೈಗೊಳ್ಳುವುದು ಅಮೇರಿಕಾದಅರ್ಥಿಕ ಸಾಮರ್ಥ್ಯಕ್ಕೂ ಮಾರಕವಾಗಬಲ್ಲದೆಂದು ಸ್ವತಃ ಅಮೇರಿಕನ್ ಅರ್ಥ ಶಾಸ್ತ್ರಜ್ಞರ ಅಭಿಪ್ರಾಯ.

ರೀಗನ್‌ರ ಮೈತ್ರಿಕೂಟದಲ್ಲಿರುವ ಪಶ್ಚಿಮ ಯುರೋಪಿನ ಅನೇಕ ರಾಷ್ಟ್ರಗಳು ಗೋರ್ಬಚೋವ್ ಅವರ ಪ್ರಸ್ತಾಪಗಳು ವಾಸ್ತವ ದೃಷ್ಟಿಯನ್ನು ಹೊಂದಿವೆಯೆಂದೂ ಅವುಗಳ ಕುರಿತು ಕೂಡಲೇ ಮಾತುಕತೆಯನ್ನು ನಡೆಸುವುದು ಶಸ್ತ್ರಾಸ್ತ್ರ ಪೈಪೋಟಿಯನ್ನು ಕೊನೆಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುವುದೆಂದೂ ಭಾವಿಸಿವೆ. ಮಾತುಕತೆ ನಡೆಸುವಲ್ಲಿ ವಿನಾಕಾರಣ ಮೀನಮೇಷ ಧರಿಸಿರುವ ಅಮೇರಿಕಾದ ಆಡಳಿತೆ ಪಶ್ಚಿಮ ಯುರೋಪಿನ ತನ್ನ ಸ್ನೇಹಕ್ಕೂ ಎರವಾಗಬೇಕಾಗುತ್ತತೆ.

ಲ್ಯಾಟಿನ್ ಅಮೇರಿಕಾ -

ಹತ್ತು ಕೋಟಿ ಮಂದಿ ದಟ್ಟದಾರಿದ್ರ್ಯದಲ್ಲಿ

ಲ್ಯಾಟಿನ್ ಅಮೇರಿಕಾದ ಸಂಶೋಧನಾ ಸಂಸ್ಥೆಯೊಂದು ಇತ್ತೀಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಲ್ಲಿ ಉಪವಾಸದ ಹಂತದಲ್ಲಿರುವ ಜನರು ಸುಮಾರು 10 ಕೋಟಿ. ಲ್ಯಾಟಿನ್ ಅಮೆರಿಕಾದ ಶೇ40ರಷ್ಟು ಮಂದಿ ಕಡುಬಡವರು ಮತ್ತು ಅವಿದ್ಯಾವಂತರು ಈ ಸಂಖ್ಯೆ 2000ನೇ ಇಸವಿಯ ಹೊತ್ತಿಗೆ 17ಕೋಟಿಯನ್ನು ಮೀರುವುದೆಂದು ಅಂದಾಜು ಮಾಡಲಾಗಿದೆ.

ಈ ವರದಿಯಂತೆ ಲ್ಯಾಟಿನ್ ಅಮೆರಿಕಾದಲ್ಲಿ ಕೇವಲ ಎರಡು ರಾಷ್ಟ್ರಗಳು ಆರ್ಥಿಕ ಮುಗ್ಗಟ್ಟಿನಿಂದಲೂ ನಿರಕ್ಷರತೆಯ ಪಿಡುಗಿನಿಂದಲೂ ಪಾರಾಗಿವೆ. ಅವು ಸಮಾಜವಾದಿ ಹಾದಿಯಲ್ಲಿರುವ ಕ್ಯೂಬಾ ಮತ್ತು ನಿಕರಾಗುವಾ ಮಾತ್ರ. ಕ್ಯೂಬಾ ತೀರಾ ಕಡಿಮೆ ಅವಧಿಯಲ್ಲಿ ಅಂದರೆ 1961ರಲ್ಲೇ ನಿರಕ್ಷರತೆಯನ್ನು ಹೊಡೆದೋಡಿಸಿದರೆ ನಿಕರಾಗುವಾದಲ್ಲಿ 1980ರಿಂದ ಇನ್ನೇನು ನಿರಕ್ಷರತೆ ಪೂರ್ಣವಾಗಿ ಮಾಯವಾಗಲಿದೆ.

ಕಾಮನ್‌ವೆಲ್ತ್ ಕ್ರೀಡಾ ಕೂಟಕ್ಕೆ ಬಹಿಷ್ಕಾರ

ಬ್ರಿಟನ್, ದಕ್ಷಿಣ ಆಫ್ರಿಕದ ವಿರುದ್ಧ ಆರ್ಥಿಕ ದಿಗ್ಬಂಧ ಹೇರುವುದನ್ನು ವಿರೋಧಿಸುತ್ತಿರುವುದನ್ನು ಪ್ರತಿಭಟಿಸಿ ನೈಜೀರಿಯಾ, ಘಾನಾ, ಕೀನ್ಯಾ, ಉಗಾಂಡ ಮತ್ತು ತಾಂಜಾನೀಯಗಳು ಜುಲೈ 24ರಂದು ಆರಂಭಗೊಳ್ಳುವ ಕಾಮನ್‌ವೆಲ್ತ್ ಕ್ರೀಡಾ ಕೂಟವನ್ನು ಬಹಿಷ್ಕರಿಸಿವೆ. ದಿನಾಂಕ 18 ರಂದು ಸೇರಲಿರುವ ಆಫ್ರಿಕಾದ ಸದಸ್ಯ ರಾಷ್ಟ್ರಗಳೆಲ್ಲಾ ಈ ಅಭಿಪ್ರಾಯಕ್ಕೆ ಬರಬಹುದು ಭಾರತ, ಮಲೇಷಿಯಾ ಕೂಡ ಆಫ್ರಿಕಾದ ರಾಷ್ಟ್ರಗಳ ಈ ತೀರ್ಮಾನಕ್ಕೆ ಕಾಯುತ್ತಿವೆ. ಈ ದೇಶಗಳೂ ಬಹಿಷ್ಕಾರ ಹಾಕಬಹುದು.

ಅಮೇರಿಕಾದಲ್ಲಿ ದ. ಆಫ್ರಿಕಾ ವಿರುದ್ಧ ಪ್ರತಿಭಟನೆ

ಇತ್ತೀಚೆಗೆ ಅಮೆರಿಕಾದ ಅತ್ಯಂತ ದೊಡ್ಡನಗರ, ವಿಶ್ವ ಸಂಸ್ಥೆಯ ಕೇಂದ್ರ ನ್ಯೂಯಾರ್ಕ್ ನಗರದಲ್ಲಿ ಒಂದೂವರೆ ಲಕ್ಷಜನರ ಬೃಹತ್‌ಪ್ರತಿಭಟನಾ ಸಭೆ. ದ. ಆಫ್ರಿಕಾದ ಸೊವೆಟೋದಲ್ಲಿ ಹಿಂದೆ ನಡೆದ ದಬ್ಬಾಳಿಕೆಯ ವಾರ್ಷಿಕಾಚರಣೆ. "ದ. ಆಫ್ರಿಕಾದಲ್ಲಿ ಕರಿಯರ ಮೇಲಿನ ದಬ್ಬಾಳಿಕೆಯನ್ನು ತೊಲಗಿಸಿ "ನೆಲ್ಸನ್ ಮಾಂಡೇಲಾರನ್ನು ಬಂಧನ ಮುಕ್ತರನ್ನಾಗಿ ಮಾಡಿ" "ದಕ್ಷಿಣ ಆಫ್ರಿಕಾ ಸರಕಾರಕ್ಕೆ ಬೆಂಬಲ ನೀಡುತ್ತಿರುವ ರೇಗನ್‌ಗೆ ಧಿಕ್ಕಾರ" ಎಂಬುದು ಅವರ ಘೋಷಣೆ. ಈ ಬೃಹತ್ ಮೆರವಣಿಗೆಯಲ್ಲಿ ಅಮೇರಿಕದಲ್ಲಿ ವಾಸಮಾಡುವ ಕರಿಯರು ಮಾತ್ರವೇ ಅಲ್ಲ, ಎಲ್ಲ ಜನಗಳೂ ಭಾಗವಹಿಸಿದ್ದರು. ಎಲ್ಲ ರಂಗಗಳಲ್ಲಿ ಕೆಲಸ ಮಾಡುವ ಜನರು ಮೂರು ಕಡೆ ಸೇರಿ ಮೆರವಣಿಗೆಯಲ್ಲಿ ಉದ್ದಕ್ಕೂ ಎಡೆಬಿಡದೆ ಘೋಷಣೆಗಳನ್ನು ಕೂಗುತ್ತಾ ಸಾಗಿ ಬಂದರು. ದಾರಿಯಲ್ಲಿ ವಿಶ್ವಸಂಸ್ಥೆಯ ಅಮೆರಿಕಾ ಕಛೇರಿಯ ಮುಂದೆ ದ. ಆಫ್ರಿಕಾದಲ್ಲಿ ಬಂಡವಾಳ ಹೂಡಿ ಕೈಗಾರಿಕೆ ನಡೆಸುತ್ತಾ ಅಲ್ಲಿನ ಎಲ್ಲಾ ಹಿಂಸೆ ಅತ್ಯಾಚಾರಗಳಿಗೆ ಬೆಂಬಲ ನೀಡುತ್ತಿರುವ ಬ್ಯಾಂಕ್ ಇತ್ಯಾದಿ ಕಛೇರಿಗಳ ಮುಂದೆ ನಿಂತು ಧಿಕ್ಕಾರ ಹಾಕಿದರು.

ಥ್ಯಾಚರ್ ಚಂಡಿತನ

ದಕ್ಷಿಣ ಆಫ್ರಿಕಾದಲ್ಲಿ ಕರಿಯರಮೇಲಿನ ದಬ್ಬಾಳಿಕೆಯನ್ನು ಕೊನೆಗಾಣಿಸಲು ಅವರೊಡನೆ ಎಲ್ಲ ವ್ಯಾಪಾರದ ವ್ಯವಹಾರಗಳಿಗೆ ಬಹಿಷ್ಕಾರ ಹಾಕುವುದೇ ಕೊನೆಯ ಉಪಾಯವೆಂದು ಜಗತ್ತಿನಾದ್ಯಂತ ಅಭಿಪ್ರಾಯ ಮೂಡಿಬಂದಿದೆ. ಇಂದಿನ ಸನ್ನಿವೇಶದಲ್ಲಿ ಬ್ರಿಟನ್, ಅಮೇರಿಕಾಗಳು ಮಾತ್ರ ಬೋಥಾ ಆಡಳಿತೆಯ ನೀತಿಗೆ ಬೆಂಬಲ ನೀಡುತ್ತಿರುವುದು ಲಜ್ಜಾಸ್ಪದ. ಬ್ರಿಟೀಷ್ ಸರಕಾರವಂತೂ ತನ್ನ ಸ್ವಂತ ಅಸ್ತಿತ್ವವನ್ನೇ ಮರೆತು ರೀಗನ್ನರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಇಂತಹ ಬ್ರಿಟನ್‌ನಲ್ಲೂ ಇದೀಗ ದಕ್ಷಿಣ ಆಫ್ರಿಕಾದ ಮೇಲೆ ಆರ್ಥಿಕ ದಿಗ್ಬಂಧ ಹೇರಬೇಕೆಂಬ ಬೇಡಿಕೆ ಬಲವಾಗುತ್ತಿದೆ. ಬ್ರಿಟೀಷ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಅವರ ನಂಬುಗೆಯ ಬಂಟನೆಂದು ಭಾವಿಸಲಾಗಿದ್ದ ಬ್ರಿಟೀಷ್ ಸರಕಾರದ ಮಾಜಿ ವಾಣಿಜ್ಯಮಂತ್ರಿ ಇದೀಗ ದಕ್ಷಿಣ ಆಫ್ರಿಕದ ಮೇಲೆ ಆರ್ಥಿಕ ದಿಗ್ಬಂಧ ಹೇರಲು ಒಪ್ಪದೇ ಇರುವುದಕ್ಕಾಗಿ ಥ್ಯಾಚರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ದಕ್ಷಿಣ ಆಫ್ರಿಕ ಮತ್ತು ಮುಂಚೂಣಿ ರಾಷ್ಟ್ರಗಳಾದಜಿಂಬಾಬ್ವೆ, ಜಾಂಬಿಯ ಮತ್ತು ಬೋತ್ಸ್ವಾನಾಗಳಿಗೆ "ಶಾಂತಿಯಾತ್ರೆ" ನಡೆಸಿದ ಈಗಿನ ವಿದೇಶಾಂಗ ಕಾರ್ಯದರ್ಶಿ ಸರ್ ಜೆಫ್ರಿ ಹೋವ್ ಅವರ ಶಾಂತಿಯತ್ನ ವಿಫಲವಾದರ ಬ್ರಿಟೀಷ್ ಸರಕಾರ ದ. ಆಫ್ರಿಕಾದ ಮೇಲೆ ದಿಗ್ಬಂಧ ಹೇರಲು ಹಿಂಜರಿಯಕೂಡದು ಎಂದು ಲಿಯಾನ್ ಬ್ರಿಟ್ಟನ್ ಹೇಳಿದ್ದಾರೆ. ವರ್ಣದ್ವೇಷ ನೀತಿಯ ಭದ್ರಕೋಟೆಯಾಗಿರುವ ದ. ಆಫ್ರಿಕದ ಮೇಲೆ ಏನಾದರೂ ಒತ್ತಡ ಹೇರಬೇಕಾಗಿದ್ದರೆ ಆರ್ಥಿಕ ದಿಗ್ಬಂಧವೊಂದೇ ಉಳಿದಿರುವ ಸಾಧನವೆಂದೂ ಕೇವಲ ಒತ್ತಾಯದ ಮೂಲಕ ಪರಿಸ್ಥಿತಿಯನ್ನು ಬದಲಾಯಿಸಲಾಗದೆಂದೂ ಅವರು ಹೇಳಿದ್ದಾರೆ.

"ದ. ಆಫ್ರಿಕಾ ಸರಕಾರ ನಿಮ್ಮನ್ನು ಮುಕ್ತ ಕಂಠದಿಂದ ಹೊಗಳುತ್ತಿರುವುದು ನಿಮಗೆ ಹೆಮ್ಮೆಯುಂಟುಮಾಡುತ್ತಿದೆಯೇ ?" ಎಂದು ಲಿಬರಲ್ ಪಕ್ಷದ ಮುಂದಾಳು ಥ್ಯಾಚರ್ ಅವರನ್ನು ನೇರವಾಗಿ ಪ್ರಶ್ನಿಸಿದ್ದಾರೆ. ಆರ್ಥಿಕ ದಿಗ್ಬಂಧದಿಂದ ಏನೂ ಸಾಧನೆಯಾಗುವುದಿಲ್ಲವೆಂದು ಬ್ರಿಟಿಷ್ ಪ್ರಧಾನಿ ಹೇಳುತ್ತಿರುವುದು ಕೇವಲ ಸುಳ್ಳು. ನಿಜ ಏನೆಂದರೆಆರ್ಥಿಕ ದಿಗ್ಬಂಧ ಪರಿಣಾಮಕಾರಿಯಾಗುತ್ತದೆ, ಅದಕ್ಕೆ ಥ್ಯಾಚರ್ ದಿಗ್ಬಂಧ ಹೇರಲು ಹಿಂಜರಿಯುತ್ತಿದ್ದಾರೆ ಎಂಬುದು ಲೇಬರ್ ಪಕ್ಷದ ಮುಖಂಡ ನೀಲ್ ಕಿನ್ನೋಕ್ ಅವರ ಅಭಿಪ್ರಾಯ. "ಗಾರ್ಡಿಯನ್ ಪತ್ರಿಕೆಗೆ" ಸಂದರ್ಶನ ನೀಡಿದಾಗ ನೀವು ನಿಮ್ಮ ನೀತಿಯನ್ನು ಸಮರ್ಥಿಸಿಕೊಂಡ ಧಾಟಿಯಲ್ಲಿ ಮುಂಬರುವ ಕಾಮನ್‌ವೆಲ್ತ್ ಸಮ್ಮೇಳನದಲ್ಲೂ ಮಾತಾಡಬೇಡಿ, ಅದರಿಂದ ಅನಾಹುತವಾಗುತ್ತದೆ ಎಂದು ಕಿನ್ನೋಕ್ ಥ್ಯಾಚರ್‌ಗೆ ಎಚ್ಚರಿಕೆ ನೀಡಿದ್ದಾರೆ.

ದ. ಆಫ್ರಿಕಾದ ಮೇಲೆ ಸಾರ್ವತ್ರಿಕ ಆರ್ಥಿಕ ದಿಗ್ಬಂಧ ಹೇರುವಂತೆ ತಮ್ಮ ತಮ್ಮ ದೇಶದ ಸರಕಾರಗಳ ಮೇಲೆ ಒತ್ತಾಯ ತರಬೇಕೆಂದು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘದ ವಾರ್ಷಿಕ ಅಧಿವೇಶನ ಜಗತ್ತಿನ ಎಲ್ಲಾ ಟ್ರೇಡ್‌ಯೂನಿಯನ್ ಸಂಘಟನೆಗಳಿಗೆ ಕರೆ ನೀಡಿದೆ.

ಮತ್ತೆ ಬರಗಾಲದ ಭೀತಿಯೇ ?

(ಒಂದನೇ ಪುಟದಿಂದ)

ಎಂದು ಒತ್ತಾಯ ಮಾಡಿ ಕೆಲಸ ಸಾಧಿಸುವುದು ಪ್ರಾಂತ ರೈತ ಸಂಘದ ಕರ್ತವ್ಯ.

ಬರಗಾಲದ ಹೆಸರಿನಲ್ಲಿ ಕೈಗೊಂಡ ಕೆಲವು ಕಾಮಗಾರಿಗಳ ವಿವರಣೆ ಅವಗಾಹನೆಗಾಗಿನೋಡಿಕೊಳ್ಳಬಹುದು.

ಚಿತ್ರದುರ್ಗ ಜಿಲ್ಲೆಯ ತರಿಕೆರೆ ತಾಲೂಕಿನಲ್ಲಿ ವೇದಾವತಿ ನದಿಗೆ ನೀರು ಣಿಸುವ ಕಾಲುವೆಯ ಕೆಲಸ ಕಳೆದ ಹಲವಾರು ವರ್ಷಗಳಿಂದ ಈ ಯೋಜನೆಗಾಗಿ ಬರೇರೂ.5ಲಕ್ಷವಾತ್ರ ಒದಗಿಸುತ್ತಿದ್ದುದರಿಂದ ಆಮೆ ವೇಗದಲ್ಲಿಯೇ ಕೆಲಸ ಮುಂದುವರಿದಿತ್ತು. ಈ ವರ್ಷ ಬರಗಾಲದ ಹೆಸರಿನಲ್ಲಿ ರೂ. 45ಲಕ್ಷ ಒದಗಿಸಿದ ಕಾರಣ ಇಡೀ ಕಾಲುವೆ ಕೆಲಸವನ್ನು ಮುಗಿಸಿರೈತರಿಗೆನೀರೊದಗಿಸಲು ಸಾಧ್ಯವಾಗಿದೆ.

ಬಿಜಾಪುರ ಜಿಲ್ಲೆಯ ಬಾದಾಮಿಗೆ ಮಲಪ್ರಭೆಯ ನೀರು ಪೂರೈಸುವ ಕೆಲಸ ಬಹಳ ವರ್ಷದಿಂದ "ಬೇಕೋ ಬೇಡವೋ" ಎಂಬಂತೆ ಸಾಗಿತ್ತು. ಈ ವರ್ಷ 3200 ಕೆಲಸಗಾರರನ್ನು ಕಾಲುವೆ ಆಗೆಯುವ ಕೆಲಸದಲ್ಲಿ ತೊಡಗಿಸಿದ ಕಾರಣ 16ಕಿ.ಮೀಟರ್ ಉದ್ದ ಕಾಲುವೆ ತಯಾರಾಗಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಗಿಯಲ್ಲಿ 26 "ಕೆರೆಗಳನ್ನು ಆಗೆಯಲಾಗಿದೆ. ಅವುಗಳಲ್ಲಿ ಮಳೆಗಾಲದಲ್ಲಿ ನೀರು ಶೇಖರಣೆಯಾಗುವುದರಿಂದ ಇಡೀ ಪ್ರದೇಶದಲ್ಲಿ ಭೂಗತ ನೀರಿನ ಮಟ್ಟ ಮೇಲಕ್ಕೇಳಿಯಲು ಸಾಧ್ಯ.

ಧಾರವಾಡ ಜಿಲ್ಲೆಯ ನವಲಗುಂದದಲ್ಲಿರುವ ಕೆರೆಯ ಹೂಳು ತೆಗೆದಿರುವುದರಿಂದ ಹೆಚ್ಚು ನೀರು ಶೇಖರಣೆಯಾಗಿ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾದಂತಾಗಿದೆ. ಇನ್ನೆರಡು ವರ್ಷ ನೀರಿಗಾಗಿ ಪರದಾಟ ಅಗತ್ಯವಿಲ್ಲೆಂದು ಊರ ಜನರ ಅನಿಸಿಕೆ. ಧಾರವಾಡ ಜಿಲ್ಲೆಯ ಬಹುತೇಕ ಪ್ರದೇಶದಲ್ಲಿ ಭೂಗತ ನೀರು ಉಪ್ಪಿನಂಶ ಹೊಂದಿರುತ್ತದೆ. ಆದ್ದರಿಂದ ಜಿಲ್ಲೆಯ ಕೆರೆಗಳ ಮಣ್ಣು ತೆಗೆಯುವುದರಿಂದ ಹೆಚ್ಚು ಮಳೆ ನೀರುಶೇಖರಿಸಿಕುಡಿಯಲಿಕ್ಕೆ ಅನುಕೂಲ ಮಾಡಿಕೊಡಬಹುದು. ಕೆಲವು ಕಡೆ ಹೊಲಗಳಲ್ಲಿ ಕಂಟೋರ ಒಡ್ಡು ಹಾಕಿರುವುದರಿಂದ ಮಳೆ ನೀರು ತಡೆಹಿಡಿಯಲು ಹಾಗೆಯೇ ಮಣ್ಣು ಕೊರೆದು ಹೋಗುವುದನ್ನು ತಪ್ಪಿಸಲು ಸಾಧ್ಯವಾಗಿದೆ

ರೈತ ಸಂಘ ಸತತವಾಗಿ ಹೋರಾಡಿದಫಲವಾಗಿ, ಮಾರ್ಕ್ಸ್‌ವಾದಿಕಮ್ಯುನಿಸ್ಟ್‌ಪಕ್ಷ ಮಂತ್ರಿಗಳಿಗೂ, ಅಧಿಕಾರಿಗಳಿಗೂ ಒತ್ತಡ ತಂದ ಪರಿಣಾಮವಾಗಿ ಕೆಲವು ಹೊಸ ಕೆರೆಗಳನ್ನು ಕಟ್ಟಲು, ಹೊಸ ರಸ್ತೆಗಳನ್ನು ನಿರ್ಮಿಸುವಂತೆ ಮಾಡಲು ಸಾಧ್ಯವಾಗಿದೆ, ನಾರಾಯಣಪುರಆಣೆ ಕಟ್ಟೆಯಲ್ಲಿ ಸಾಕಷ್ಟು ನೀರಿದ್ದರೂ ಕೂಡ ಗುಲ್ಬರ್ಗ ಜಿಲ್ಲೆಯ ಶಹಪುರ ಮೊದಲಾದ ಪ್ರದೇಶಕ್ಕೆ ಹಾಗೆಯೆ ರಾಯಚೂರ ಜಿಲ್ಲೆಗೆ ನೀರು ಪೂರೈಸಲಿಕ್ಕೆ ಕಾಲುವೆ ಕೆಲಸ ಹಾಗೆಯೇ ಆಲಮಟ್ಟಿಯ ಹತ್ತಿರ ಕೃಷ್ಣಾ ಯೋಜನೆಯಿಂದ ಬಿಜಾಪುರ ಜಿಲ್ಲೆಗೆ ನೀರು ಪೂರೈಸುವ ಸಲುವಾಗಿ 1970 ರಲ್ಲೇ ಕಮ್ಯುನಿಸ್ಟ್ ಪಕ್ಷಗಳ ಒತ್ತಡದಿಂದ ಪ್ರಾರಂಭವಾದ ಕಾಲುವೆ ಅಗೆಯುವ ಕೆಲಸಗಳನ್ನು ಮುಂದುವರಿಸುವಂತೆ ಮಾಡಲು ಸಾಧ್ಯವಾಗಲಿಲ್ಲ.

ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆಯ ಹರಪನ ಹಳ್ಳಿ, ಗುಲ್ಬರ್ಗಾ, ಬಿಜಾಪುರ ಜಿಲ್ಲೆಗಳಲ್ಲಿ ಪ್ರಾಂತ ರೈತ ಸಂಘ ನಿರ್ದಿಷ್ಟ ಬೇಡಿಕೆಗಳಿಗಾಗಿ ಚಳುವಳಿ ಹೂಡಿರುವುದರಿಂದ ಹಲವಾರು ಕಡೆ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸುವಂತೆ, ದುಡಿಯುವವರಿಗೆ ಸರಿಯಾಗಿ ಕೂಲಿ ಕೊಡಿಸುವಂತೆ ಮಾಡಲು ಸಾಧ್ಯವಾಗಿದೆ.

ರಸ್ತೆಯ ಮೇಲೆ ಮಣ್ಣು ಹಾಕುವುದಕ್ಕಾಗಿಯೇ ಕೋಟ್ಯಾವಧಿ ಖರ್ಚು ಮಾಡುವುದು ನಿಷ್ಫಲ. ಆ ಹಣವನ್ನು ನಿರಾವರಿ ಯೋಜನೆಗಳಿಗಾಗಿ, ಕೆರೆ, ಬಾವಿಗಳ ಮಣ್ಣು ತೆಗೆಯಲು, ಹೊಸ ಕೆರೆ, ಬಾವಿಗಳನ್ನು ನಿರ್ಮಿಸಲು ವ್ಯಯ ಮಾಡಿದರೆ ಕಾಯಂ ಬರಪರಿಹಾರ ಸಾಧ್ಯವಾಗಬಹುದೆಂದು ಪ್ರಾಂತ ರೈತ ಸಂಘ ಮತ್ತು ಸಿ.ಪಿ.ಐ. (ಎಂ) ಈಗಲೂ ಒತ್ತಾಯ ಪಡಿಸುತ್ತಿವೆ.

ಮಂತ್ರಿ ಬೊಮ್ಮಾಯಿಯ ಹೇಳಿಕೆ ಪ್ರಕಾರ 1985-86 ರ ಬರಗಾಲ ಕೆಸಲದಲ್ಲಿ ಇಡೀ ರಾಜ್ಯದಲ್ಲಿ 5,749 ಕಿ. ಮೀ ಹೊಸ ರಸ್ತೆ ನಿರ್ಮಾಣ, 11.657 ಕಿ. ಮೀ. ಹಳೆರಸ್ತೆ ರಿಪೇರಿಯಾಗಿದೆ, 156 ಹೊಸ..ಕೆರೆ ಕಟ್ಟಲಾಗಿದೆ, 1796 ಹಳೇ ಕೆರೆಗಳ ಮಣ್ಣು ತೆಗೆಯಲಾಗಿದೆ, 44,835 ಹೆಕ್ಟೇರ್ ಭೂಮಿಯಲ್ಲಿ ಮಣ್ಣು ಉಳಿಸುವ ಕಾರ್ಯ ಮುಗಿದಿದೆ.

ರಾಜ್ಯ ಸರಕಾರ ತನ್ನ ಅಧಿಕೃತ ಹೇಳಿಕೆ ಪ್ರಕಾರ ಖರ್ಚು ಮಾಡಿದ ಕೋಟ್ಯಾವಧಿ ರೂಪಾಯಿ ಗೆ ಮಂತ್ರಿ ಬೊಮ್ಮಾಯಿಯವರು ಬೆನ್ನು ಚಪ್ಪರಿಸಿ ಕೊಂಡು ಹೇಳುವಷ್ಟು ಕೆಲಸ ಆಗಿಲ್ಲೆಂದೇ ಹೇಳಬೇಕು. ಪ್ರಾಂತ ರೈತ ಸಂಘ ಒತ್ತಾಯ ಮಾಡುತ್ತ ಬಂದಂತೆ ಪ್ರತಿಯೊಂದು ಜಿಲ್ಲೆ ತಾಲ್ಲೂಕುಗಳಲ್ಲಿ ಪ್ರಾಂತ ರೈತ ಸಂಘದ ಪ್ರತಿನಿಧಿಗಳನ್ನೊಳಗೊಂಡ ಸರ್ವ ಪಕ್ಷ ಸಮಿತಿ ರಚಿಸಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬರಗಾಲ ಕಾಮಗಾರಿ ಕೆಲಸ ಕೈಗೊಳ್ಳುತ್ತಿದ್ದಾರೆ, ಈಗ ಈ ವರ್ಷ ಖರ್ಚು ಮಾಡಿದ ಹಣ ದಿಂದಲೇ ಇನ್ನೂ ಹೆಚ್ಚು ಫಲಕಾರಿ ಕಾರ್ಯ ಮುಗಿಸಬಹುದಾಗಿತ್ತು. ಬರಗಾಲ ನಿವಾರಣೆಗೆ ಖಾಯಂ ಕೆಲಸಗಳಾಗಬಹುದಾಗಿತ್ತು.

ಇನ್ನೂ ಕಾಲ ಮೀರಿಲ್ಲ. ಬರಗಾಲದ ಬವಣೆಯು ತಪ್ಪಿದ್ದಲ್ಲ. ಕಳೆದ ಒಂದು ವರ್ಷದಲ್ಲಿ ಸರಕಾರ ಹಾಗೂ ಜನತೆ ಸಾಕಷ್ಟು ಅನುಭವ ಪಡೆದಿದೆ. ಜನತಾ ಸರಕಾರ ಆ ಅನುಭವಗಳ ಆಧಾರದಲ್ಲಿ ಪ್ರಾ. ರೈತ ಸಂಘ ಹಾಗೆಯೇ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿರ್ದಿಷ್ಟ ಕಾರ್ಯಕ್ರಮಗಳ ಆಧಾರದಲ್ಲಿ ಕೆಲಸ ಮಾಡಿದರೆ ರಾಜ್ಯದ ಬರಗಾಲ ಮುಂದಿನ ವರ್ಷಗಳಲ್ಲಿ ಸ್ವಲ್ಪವಾದರೂ ಪರಿಹಾರ ಕಾಣ ಬಹುದಾಗಿದೆ.

ಬರ ಪರಿಹಾರಕ್ಕೆ ನದಿ ನೀರನ್ನು ಸರಿಯಾಗಿ ಬಳಸುವ ವ್ಯವಸ್ಥೆ ಮಾಡಬೇಕು, ಮಳೆಗಾಲದಲ್ಲಿ ಬೀಳುವ ನೀರನ್ನು ಸಾಧ್ಯವಾದಷ್ಟು ಶೇಖರಿಸಿಡುವುದಕ್ಕಾಗಿ ಕೆರೆ, ಬಾವಿಗಳು ಬೇಕು. ಜೊತೆಯಲ್ಲಿಯೇ ಮರ ಕಡಿದು ಬೋಳಾಗುತ್ತಿರುವ ಮಲೆನಾಡು ಹಾಗೆಯೇ ಇತರ ಪ್ರದೇಶಗಳಲ್ಲಿ ಗಿಡ ನೆಡುವ ಕಾರ್ಯಕ್ರಮ ಯಶಸ್ವಿ ಆಗಬೇಕು.

ಕರ್ನಾಟಕ ರಾಜ್ಯದಲ್ಲಿ ಹಲವಾರು ಅತಿ ದೊಡ್ಡ ನದಿಗಳು ಭೀಮಾ, ಕೃಷ್ಣ, ಘಟಪ್ರಭಾ, ಮಲಾಪ್ರಭಾ, ತುಂಗಾಭದ್ರಾ, ಹೇಮಾವತಿ, ಶರಾವತಿ ಮೊದಲಾದವುಗಳು ಹರಿಯುತ್ತಿದ್ದರೂ ಕೂಡ ಅವುಗಳ ಪೂರ್ಣ ಉಪಯೋಗ ರೈತರಿಗೆ ಲಭ್ಯವಾಗುತ್ತಿಲ್ಲ. ಸರಕಾರಿ ಅಂಕೆ ಸಂಖ್ಯೆಗನುಸಾರವಾಗಿಯೇ ನಮ್ಮ ರಾಜ್ಯದಲ್ಲಿಯ ನೀರಾವರಿ ಪ್ರದೇಶ ಶೇ. 18 ರಿಂದ 22 ರಷ್ಟು ಮಾತ್ರ. ಕಳೆದ 30 ವರ್ಷದಲ್ಲಿ ಬರಗಾಲ ನಿವಾರಣೆಗಾಗಿ ವ್ಯಯ ಮಾಡಿದ ಹಣವನ್ನು ಚಿಕ್ಕ, ಮಧ್ಯಮ ದೊಡ್ಡ ನೀರಾವರಿಗಳಿಗೆ ಖರ್ಚು ಮಾಡುತ್ತಿದ್ದರೆ, ರಾಜ್ಯದ ನೀರಾವರಿ ಕ್ಷೇತ್ರ ಶೇ. 50 ಕ್ಕಿಂತಲೂ ಜಾಸ್ತಿಯಾಗುತ್ತಿತ್ತು. ನೀರಾವರಿಯಿಂದಾಗಿ ಹವಾಮಾನವೇ ಬದಲಾವಣೆಯಾಗುವುದರಿಂದ ಬಿಸಿಲಿನ ಬೇಗೆ ಕಡಿಮೆಗೊಳಿಸಬಹುದಾಗಿತ್ತು. ವ್ಯಾಪಾರಿ ಬೆಳೆಗಳನ್ನು ಹೆಚ್ಚು ಬೆಳೆಗೆ ಕೃಷಿಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಬೆಳೆಸಿ ನಿರುದ್ಯೋಗ ಸಮಸ್ಯೆಗೆ ಸ್ವಲ್ಪ ಪರಿಹಾರ ಒದಗಿಸಬಹುದಿತ್ತು. ಬರಗಾಲದಲ್ಲಿ ಕೆಲಸವಿಲ್ಲದೆ ಊರು ಬಿಟ್ಟು ಹೋಗುವ ಬಡರೈತರನ್ನು ನಮ್ಮಲ್ಲೇ ಉಳಿಸಬಹುದಿತ್ತು.

ಬಂಡವಾಳಶಾಹಿ ವರ್ಗದ ಸರಕಾರಗಳು ಅಸ್ತಿತ್ವದಲ್ಲಿರುವ ತನಕ ಇವುಗಳೆಲ್ಲ ಬರೀ ಪ್ರಶ್ನಾರ್ಥಕ ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಆದರೆ ಬಲಿಷ್ಠವಾದ ರೈತ ಸಂಘಟನೆ ಹಾಗೆಯೇ ಪ್ರಜಾಪ್ರಭುತ್ವ ಚಳುವಳಿ ಬೆಳೆದುಬಂದರೆ ಪರಿಸ್ಥಿತಿ ಬದಲಾಗಬಹುದು, ಬದಲಾಗುತ್ತದೆ. ಆದ್ದರಿಂದ ಪಾಟ್ನಾ ಸಮ್ಮೇಳನದ ಕರೆಯನ್ನು ಧೈರ್ಯದಿಂದ, ನಿಷ್ಠೆಯಿಂದ ನಮ್ಮ ರಾಜ್ಯದಲ್ಲಿ ಅನುಷ್ಠಾನದಲ್ಲಿ ತಂದರೆ ಸರಕಾರದ ನೀತಿಯಲ್ಲಿ ಬದಲಾವಣೆಯನ್ನುಂಟು ಮಾಡಬಹುದಾಗಿದೆ. ಆ ದಿಕ್ಕಿನಲ್ಲಿ ಪ್ರಾಂತ ರೈತ ಸಂಘ ಕಾರ್ಯ ಪ್ರವೃತ್ತವಾಗಲಿ.

○

ಮೈಕೋ ಚುನಾವಣೆ

ಸೂರಿ ಮರುಆಯ್ಕೆ

ಮೈಕೋ ಕಾರ್ಮಿಕರ ಯೂನಿಯನ್ನಿನಪದಾಧಿಕಾರಿಗಳ ಚುನಾವಣೆಯಲ್ಲಿ ಸಿ. ಐ. ಟಿ. ಯು. ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅವರು ತಮ್ಮ ಪ್ರತಿಸ್ಪರ್ಧಿಯಿಂದ 1300ಕ್ಕೂ ಹೆಚ್ಚು ಮತ ಪಡೆದು ಗೆದ್ದಿದ್ದಾರೆ. ಕಮಿಟಿಗಳಲ್ಲಿ ಕೂಡ ಅವರ ಗುಂಪಿನವರೇ ಅತ್ಯಂತ ಹೆಚ್ಚು ಬಹು ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ.

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಲೋಕಸಭೆ ಸದಸ್ಯರಾದ ಕೃಷ್ಣಐಯ್ಯರ್ ಅವರ ಫೋಟೊಗಳನ್ನೊಳಗೊಂಡ ಕರಪತ್ರ ಹಂಚಿ ಸೂರ್ಯನಾರಾಯಣ ರಾವ್ ಅವರ ವಿರುದ್ಧ ಪ್ರಬಲ ಪ್ರಚಾರ ನಡೆಸಲಾಗಿತ್ತು. ಜನತಾ ಪಕ್ಷ, ಕಾಂಗ್ರೆಸ್ ಮತ್ತು ಇತರ ಪಕ್ಷಗಳೆಲ್ಲಾ ಸೇರಿ ಹೊರಗಿನವರು ಅಧ್ಯಕ್ಷರಾಗುವುದು ಬೇಡವೆಂಬ ನಾನಾತರದ ಸುಳ್ಳುಪ್ರಚಾರಮಾಡಲಾಯಿತು ಆದರೆ ಹಲವಾರು ಧೀರ ಹೋರಾಟ ನಡೆಸಿ ಗೆದ್ದ ಮೈಕೋ ಕಾರ್ಮಿಕರು ಸೂರಿಯವರನ್ನೇ ಅಧ್ಯಕ್ಷರನ್ನಾಗಿ ಆರಿಸಿ ಅವರ ಗುಂಪಿಗೆ ಗೆಲುವು ತಂದು ಕೊಟ್ಟಿದ್ದಾರೆ, ಮೈಕೊ ಕಾರ್ಮಿಕರನ್ನು ಸಿ. ಐ. ಟಿ. ಯು. ಅಭಿನಂದಿಸುತ್ತದೆ.

○

ಹುಬ್ಬಳ್ಳಿ-ಧಾರವಾಡ

ಕಾರ್ಮಿಕರ ಹೋರಾಟಕ್ಕೆ ಬೆಂಬಲ

ಹುಬ್ಬಳ್ಳಿ-ದಾರವಾಡ ಮಹಾನಗರಗಳಲ್ಲಿ 5000ಕ್ಕಿಂತಲೂ ಹೆಚ್ಚು ಬೀಡಿ ಕೆಲಸಗಾರರಿದ್ದು 1945 ರಿಂದಲೂ ಕೆಂಬಾವುಟದ ನೇತೃತ್ವದಲ್ಲಿ ಹಲವಾರು ಹೋರಾಟ ನಡೆಸಿ ಜಯಗಳಿಸಿದ ಮಂಗಳೂರು, ಮೈಸೂರು, ತುಮಕೂರು, ಬೆಂಗಳೂರುಗಳಲ್ಲಿ ಸಿ. ಐ. ಟಿ. ಯು. ನೇತೃತ್ವದಲ್ಲಿ ಹೋರಾಟಗಳು ನಡೆದ ಕಾರಣ ಈ ಹೊತ್ತು ಅಲ್ಲಿಯ ಕಾರ್ಮಿಕರಿಗೆ ಒಂದು ಸಾವಿರ ಬೀಡಿಗೆ ರೂ. 12-28 ಸಿಗುತ್ತದೆ. ಆದರೆ ಈ ಎರಡು ನಗರದ ಕಾರ್ಮಿಕರಿಗೆ ಬರೀ ರೂ. 9.50 ಮಾತ್ರ ಕೊಡಲಾಗುತ್ತಿದೆ. ಎ. ಐ. ಟಿ. ಯು. ಸಿ. ಮುಖಂಡತ್ವ ಅದಕ್ಕೆ ಒಪ್ಪಿಕೊಂಡಿದೆ. ಇಂಥ ಅನ್ಯಾಯವನ್ನು ಪ್ರತಿಭಟಿಸಿ, ಬೀಡಿ ಕಾರ್ಮಿಕರು ಇತ್ತೀಚೆಗೆ ಸಿ. ಐ. ಟಿ. ಯು. ನೇತೃತ್ವದಲ್ಲಿ ಸಂಘ ಕಟ್ಟಿ ಹೋರಾಟಕ್ಕಿಳಿದಿದ್ದಾರೆ. ಮಂಗಳೂರಿನ ಬೀಡಿ ಕಾರ್ಮಿಕರಿಗೆ ಸಿಗುವ ಮಜೂರಿ ತಮಗೂ ಸಿಗಬೇಕೆಂದು ಕೇಳಿದಾಗ ದರ್ಬಾರ ಬೀಡಿ ಕಂಪನಿ ಮಾಲೀಕರು 10 ಕೆಲಸಗಾರರಿಗೆ ಕೆಲಸ ನಿರಾಕರಿಸಿದ್ದಾರೆ. ಜುಲೈ 18ರಿಂದ ದರ್ಬಾರ ಬೀಡಿಕಾರ್ಖಾನೆಯ ಮುಂದೆ ಧರಣಿ ಸತ್ಯಾಗ್ರಹ ಪ್ರಾರಂಭವಾಗಿದೆ. ಬೀಡಿ ಕಾರ್ಮಿಕರಿಗಾಗುತ್ತಿರುವ ಅನ್ಯಾಯದ ವಿರುದ್ಧ ನಡೆದಿರುವ ಹೋರಾಟಕ್ಕೆ ಎರಡು ನಗರಗಳಲ್ಲಿಯ ಸಿ. ಐ. ಟಿ.ಯು. ಕಾರ್ಮಿಕ ಸಂಘಗಳು ಬೆಂಬಲ ನೀಡಲು ಮುಂದೆ ಬಂದಿವೆ.

○

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone: 75331 Editor P. Ramachandra Rao Managing Editor: N K. Upadhyaya